ಸಂಪುಟ : 9 ಸಂಚಿಕೆ 30 ಪುಟ : 4 ಬೆಲೆ : 3.00 ಗುರುವಾರ ಫೆಬ್ರವರಿ 29, 2024 Mob : 9448326533- 9019256545 ಗದಗ

ಸಂಪಾದಕರು : ಎಚ್.ಎಮ್. ಶರೀಫನವರ್

# ವಿಜಯ ಸಾಕ್ಷಿ

ವಾಸ್ತವ, ವಸ್ತುನಿಷ್ಠ, ವಿಭಿನ್ನ... VIJAYA SAKSHI KANNADA DAILY ಕನ್ನಡ ದಿನಪತ್ರಿಕೆ




Volume : 9 Issue : 30 Pages : 4 Price : 3.00 Thursday February 29 2024 Gadag RNINo:KARKAN/2015/63412 E-mail: vijayasakshidaily@gmail.com Post Regn.No:GDG/72/2023-25

## 3.04 ಕೋಟಿ ರೂ. ಉಳಿತಾಯ ಬಜೆಟ್ ಮಂಡಿಸಿದ ನಗರಸಭಾಧ್ಯಕ್ಷೆ ಉಷಾ ದಾಸರ

# ನೀರು ಪೂರೈಕೆಗೆ ವಿಶೇಷ ಅನುದಾನ

■ ವಿಜಯಸಾಕ್ಷಿ ಸುದ್ದಿ, ಗದಗ

ನಗರಸಭೆ ಸಭಾಭವನದಲ್ಲಿ ಬುಧವಾರ ನಡೆದ 2024–25ನೇ ಸಾಲಿನ ಬಜೆಟ್ ಮಂಡನೆಯಲ್ಲಿ ನಗರಸಭಾಧ್ಯಕ್ಷೆ ಉಷಾ ದಾಸರ ಸತತ 3ನೇ ಬಾರಿಗೆ ಆಯ–ವ್ಯಯ ಮಂಡಿಸಿದರು. ಆರಂಭದ ಶಿಲ್ಕು 46.25 ಕೋಟಿ ರೂ. ಸೇರಿದಂತೆ ಒಟ್ಟು 198.44 ಕೋಟಿ ರೂ. ಜಮಾ ಹಾಗೂ 195.40 ಕೋಟಿ ರೂ. ವೆಚ್ಚ ಕಳೆದು, 3.04 ಕೋಟಿ ರೂ. ಉಳಿತಾಯ ಬಜೆಟ್ ಮಂಡಿಸುವಲ್ಲಿ ಯಶಸ್ವಿಯಾದರು.

ಸಭೆ ಆರಂಭಕ್ಕೂ ಮುನ್ನ ಆಡಳಿತ ಪಕ್ಷದ ಸದಸ್ಯ ಚಂದ್ರು ತಡಸದ ಮಾತನಾಡಿ, ಅವಳಿ ನಗರದಲ್ಲಿ ನೀರಿನ ಸಮಸ್ಯೆ ಆತಂಕ ಮೂಡಿಸುತ್ತಿದೆ. ಪೌರಾಯುಕ್ತರು, ಅಧಿಕಾರಿಗಳು ನಗರಸಭೆ ಸದಸ್ಯರ ಕೆಲಸ–ಕಾರ್ಯಗಳಿಗೆ ಅನುಮೋದನೆ ನೀಡುತ್ತಿಲ್ಲ ಎಂದು ಆರೋಪಿಸಿದರು. ಇದಕ್ಕೆ ಕಾಂಗ್ರೆಸ್



ಸದಸ್ಯರು ದನಿಗೂಡಿಸಿದರು. ಅವಳಿ ನಗರದ 35 ವಾರ್ಡ್‌ಗಳಲ್ಲಿಯೂ ನೀರಿನ ಸಮಸ್ಯೆಯಿದೆ. ಪ್ರತಿ ವಾರ್ಡಿನ ನೀರಿನ ಸಮಸ್ಯೆ ಪರಿಹಾರಕ್ಕೆ ಪ್ರತ್ಯೇಕವಾಗಿ 5 ಲಕ್ಷ ರೂ. ಮೀಸಲಿಡಬೇಕು. ಲೋಕಸಭೆ ಚುನಾವಣೆ ಸಮೀಪಿಸುತ್ತಿದ್ದು, ನೀತಿ ಸಂಹಿತೆ ಜಾರಿಯಾಗುವ ಮುನ್ನವೇ ಟೆಂಡರ್ ಕರೆದು, ವರ್ಕ್ ಆರ್ಡರ್ ನೀಡಬೇಕು. ಕೆಲಸ ಪೂರ್ಣಗೊಳಿಸಿದ ನಂತರ ಬಿಲ್ ಬಿಡುಗಡೆ ಮಾಡಬೇಕು ಎಂದು ಪಟ್ಟುಹಿಡಿದರು.

▸▸3ನೇ ಪುಟಕ್ಕೆ

> ಬಜೆಟ್‌ನಲ್ಲಿ ಮಂಡಿಸಿದ ಕಾರ್ಯಕ್ರಮಗಳೆಲ್ಲವೂ ಕಾರ್ಯರೂಪಕ್ಕೆ ಬರಬೇಕು. ಹಿಂದಿನ ಬಜೆಟ್‌ನಲ್ಲಿ ಘೋಷಣೆಯಾದ ಕಾರ್ಯಕ್ರಮಗಳೆಲ್ಲವೂ ಎಷ್ಟು ಜಾರಿಯಾಗಿವೆ ಎನ್ನುವ ಕುರಿತು ಮಾಹಿತಿ ನೀಡಬೇಕು. ಬೀದಿ ದೀಪ ನಿರ್ವಹಣೆ, ವಾಹನ ರಿಪೇರಿ, ಕಚೇರಿ ನಿರ್ವಹಣೆ ಹೆಸರಿನಲ್ಲಿ ಕೋಟ್ಯಾಂತರ ರೂ. ಸೋರಿಕೆಯಾಗುತ್ತಿದೆ.
>
> **– ಕೃಷ್ಣಾ ಪರಾಪುರ.**
> ನಗರಸಭೆ ಸದಸ್ಯ.

ಮಂಡನೆಯಾದ ಬಜೆಟ್ ಕುರಿತು ಪ್ರತಿಕ್ರಿಯಿಸಿದ ಪ್ರತಿಪಕ್ಷ ನಾಯಕ ಎಲ್.ಡಿ. ಚಂದಾವರಿ, ಇದೊಂದು ದಲಿತ, ಹಿಂದುಳಿದ ವರ್ಗದ ವಿರೋಧಿ ಬಜೆಟ್ ಆಗಿದೆ. ಕಳೆದ ಐದು ವರ್ಷಗಳಿಗೆ ಹೋಲಿಸಿದರೆ, ಈ ಬಾರಿ ಎಸ್‌ಸಿ/ಎಸ್‌ಟಿ ಸಮುದಾಯದ ಅಭಿವೃದ್ಧಿಗೆ ಮೀಸಲಿಟ್ಟಿರುವ ಅನುದಾನ ಅತ್ಯಂತ ಕಡಿಮೆಯಾಗಿದೆ. ಎಸ್‌ಸಿ ಸಮುದಾಯಕ್ಕೆ ಸೇರಿದ ನಾವೇ ಆಯಾ ಸಮುದಾಯಗಳ ಅಭಿವೃದ್ಧಿಗೆ ಆದ್ಯತೆ ನೀಡದಿದ್ದರೆ ಹೇಗೆ ಎಂದು ನಗರಸಭೆ ಅಧ್ಯಕ್ಷರನ್ನು ಪ್ರಶ್ನಿಸಿದರು.

### ಮಂಡಿಸಲಾದ ಪ್ರಮುಖ ಘೋಷಣೆಗಳು

* ಹೊಸ ರಸ್ತೆ ನಿರ್ಮಾಣಕ್ಕೆ 14.96 ಕೋಟಿ ರೂ.
* ರಸ್ತೆ ದುರಸ್ತಿಗಾಗಿ 75 ಲಕ್ಷ ರೂ.
* ಚರಂಡಿ ನಿರ್ವಹಣೆಗೆ 1.11 ಕೋಟಿ ರೂ.
* ಹೊಸ ಚರಂಡಿ ನಿರ್ಮಾಣಕ್ಕೆ 4.93 ಕೋಟಿ ರೂ.
* ಬೀದಿ ದೀಪ ನಿರ್ವಹಣೆಗೆ 1.50 ಕೋಟಿ ರೂ.
* ಆರೋಗ್ಯ ಮತ್ತು ನೈರ್ಮಲ್ಯಕ್ಕಾಗಿ 1.63 ಕೋಟಿ ರೂ.
* ತ್ಯಾಜ್ಯ ವಿಲೇವಾರಿಗೆ 5.40 ಕೋಟಿ ರೂ.
* ಘನತ್ಯಾಜ್ಯ ನಿರ್ವಹಣೆ 2.13 ಕೋಟಿ ರೂ.
* ಒಳಚರಂಡಿ ನಿರ್ವಹಣೆ, ನಿರ್ಮಾಣಕ್ಕೆ 1.17 ಕೋಟಿ ರೂ.
* ಸ್ಮಶಾನ ಅಭಿವೃದ್ಧಿಗೆ 1.11 ಕೋಟಿ ರೂ.



## ಇಂದಿನ ನೀರು ಪೂರೈಕೆ ವಿವರ

■ ವಿಜಯಸಾಕ್ಷಿ ಸುದ್ದಿ, ಗದಗ

ಗದಗ–ಬೆಟಗೇರಿ ಅವಳಿ ನಗರದಲ್ಲಿ ದಿ.29ರಂದು ಈ ಕೆಳಗಿನ ಏರಿಯಾಗಳಲ್ಲಿ ನೀರು ಪೂರೈಕೆ ಮಾಡಲಾಗುವುದು.

ವಾರ್ಡ್ ನಂ. 27 ಮುಳಗುಂದರ ಲೈನ್, ಹುಬ್ಬಳ್ಳಿ ಮಠದವರ ಲೈನ್, ಪಾವಡೆಯವರ ಲೈನ್, ಮೆಹರವಾಡೆ ಮಾಸ್ತರ್ ಲೈನ್ ಉಳಿದ ಕೆಲವು ಭಾಗಗಳು. ವಾರ್ಡ್ ನಂ. 26 ಹಳೆ ಬಸ್ ಸ್ಟ್ಯಾಂಡ್ ಲೈನ್, ಅಕ್ಕನ ಬಳಗ, ಮೂರು ಶಿಳ್ಳಿನ ಸಂದಿ, ಸೋಡಾದ ಅಂಗಡಿ ಲೈನ್, ಜನತಾ ಕಾಲೋನಿ ಲೈನ್, ಕಲಾಮಂದಿರ ರೋಡ್, ಕೃಷ್ಣಟಾಕೀಸ್ ಲೈನ್, ಬೇವಿನ ಕಟ್ಟಿಯವರ ಲೈನ್ ಭಾಗ –1,2 ಸಂಗಮ ಬಜಾರ್, ಲಕ್ಷ್ಮಿಚಾಳ, ಜೆಟಿ ಮಠದ ರೋಡ್, ಗೊಡಚಿ ಖಾನಾವಳಿ ಲೈನ್, ಅಂಗಡಿಯವರ ಲೈನ್, ನಾಲಬಂದರ ಲೈನ್, ಡವಳಿಯವರ ಲೈನ್, ಚಳ್ಳ ಮರದ ಲೈನ್, ತ್ರಿಮೂರ್ತಿ ಲಾಡ್ಜ್ ಲೈನ್, ಮಾಳೆಕೊಪ್ಪದ ಮಠದ ಸಂದಿ, ದನದ ದವಾಖಾನೆ ಲೈನ್, ಉರ್ದು ಶಾಲೆಯ ಹಿಂದಿನ ಭಾಗ.

ವಾರ್ಡ್ ನಂ. 33 ಜಾಕೀರ್ ಹುಸೇನ್ ಕಾಲೋನಿ, ವೀರೇಶ್ವರ ನಗರ, ಗಡ್ಡಿಯವರ ಲೈನ್, ಕರಿಗೌಡ್ರ ಲೈನ್, ಮುಳಗುಂದ ರೋಡ್, ಬ್ಯಾಂಕರ್ಸ್ ಕಾಲೋನಿ, ಪಂಚಮುಖಿ ಆಂಜನೇಯ ಗುಡಿ, ಸಾಹುಕಾರ ತೋಟದ ಲೈನ್, ಕಲಾಲರ ಲೈನ್, ಅಬ್ಬಿಗೇರಿ ಲೈನ್, ಬೂದಿಹಾಳ, ಮೆಹರವಾಡೆ ಲೈನ್.

ವಾರ್ಡ್ ನಂ. 27, 28 ಸ್ಟೇಡಿಯಂ, ಕುರುಡಗಿ ದವಾಖಾನೆ ಲೈನ್, ನಂದೀಶ್ವರ ಮಠದ ಹಿಂದಿನ ಭಾಗ, ರೊಟ್ಟಿಯವರ ಲೇಔಟ್, ಹೊಸಮನಿ ಸರ್ ಲೈನ್, ಸಜ್ಜನ ಕುಲಕರ್ಣಿಯವರ ಲೈನ್, ಎಸ್ ಬಿ ಸಂಕಣ್ಣವರ ಲೈನ್, ತಂಬ್ರಲ್ಲಿ ಮಠದ ಲೈನ್, ಉಪ್ಪಾರ ಮಾಸ್ತರ್ ಲೈನ್, ಕೆ ಹೆಚ್ ಪಾಟೀಲರ ಲೈನ್, ಅಕ್ಕಿಯವರ ಲೈನ್.

ವಾರ್ಡ್ ನಂ. 6 ಕೂಟಗಿ ಮಾಸ್ತರ್ ಲೈನ್, ಪಾಟೀಲರ ಲೈನ್, ಸ್ವಾಮಿಯವರ ಲೈನ್, ಹನುಮಂತ ದೇವರ ಗುಡಿ.

ಪೂರೈಕೆ ಮಾಡಿದ ನೀರನ್ನು ಕಾಯಿಸಿ ಆರಿಸಿ ಕುಡಿಯಲು ಗದಗ ಬೆಟಗೇರಿ ನಗರಸಭೆ ಪೌರಾಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಲೋಕಸಭಾ ಚುನಾವಣೆ ಸಿದ್ಧತೆಗಳ ಕುರಿತು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಸಭೆ

# ಚುನಾವಣಾ ಕಾರ್ಯ ಯಶಸ್ವಿಗೊಳಿಸಿ

■ ವಿಜಯಸಾಕ್ಷಿ ಸುದ್ದಿ, ಗದಗ

ಮುಂಬರುವ ಸಾರ್ವತ್ರಿಕ ಲೋಕಸಭಾ ಚುನಾವಣೆ ಕಾರ್ಯಕ್ಕೆ ವಿವಿಧ ನೋಡಲ್ ಅಧಿಕಾರಿಗಳನ್ನು ಈಗಾಗಲೇ ನೇಮಕ ಮಾಡುವ ಮೂಲಕ ಸಮಿತಿಗಳನ್ನು ರಚಿಸಲಾಗಿದೆ. ನೋಡಲ್ ಅಧಿಕಾರಿಗಳು ದಕ್ಷತೆಯಿಂದ ಕಾರ್ಯ ನಿರ್ವಹಿಸಬೇಕೆಂದು ಜಿಲ್ಲಾಧಿಕಾರಿ ವೈಶಾಲಿ ಎಂ.ಎಲ್ ತಿಳಿಸಿದರು.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಬುಧವಾರ ಲೋಕಸಭಾ ಚುನಾವಣೆ ಸಿದ್ಧತೆಗಳ ಕುರಿತಂತೆ ಜರುಗಿದ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಮಾದರಿ ನೀತಿ ಸಂಹಿತೆ ಜಾರಿಯಾದ ತಕ್ಷಣದಿಂದ ಸಾರ್ವಜನಿಕ ಸ್ಥಳಗಳಲ್ಲಿ ಪ್ರಚುರಪಡಿಸಿದ ವಿವಿಧ ಯೋಜನೆಗಳ, ನಾಯಕರುಗಳ ಪೋಸ್ಟರ್, ಬ್ಯಾನರ್, ಕಟೌಟ್‌ಗಳನ್ನು ತಕ್ಷಣ ತೆರವುಗೊಳಿಸಬೇಕು. ಜನಪ್ರತಿನಿಧಿಗಳಿಗೆ ನೀಡಲಾದ ಸರಕಾರಿ ವಾಹನಗಳನ್ನು ಹಿಂಪಡೆಯಬೇಕು. ವಿವಿಧ ರಾಜಕೀಯ ಪಕ್ಷಗಳು ನಡೆಸುವ ಸಭೆ–ಸಮಾರಂಭಗಳಿಗೆ ಅನುಮತಿ ಪಡೆಯುವುದು ಕಡ್ಡಾಯವಾಗಿರುತ್ತದೆ. ಅನುಮತಿ ಇಲ್ಲದೇ ಕಾರ್ಯಕ್ರಮ ನಡೆದಲ್ಲಿ ನಿಯಮಾನುಸಾರ ಕ್ರಮ ವಹಿಸಬೇಕೆಂದು ಸೂಚಿಸಿದರು.

ಪತ್ರಿಕೆಗಳಲ್ಲಿ ಪ್ರಕಟವಾಗುವ, ಸುದ್ದಿ ವಾಹಿನಿಗಳಲ್ಲಿ



ಪ್ರಸಾರವಾಗುವ ಸಂದರ್ಶನ, ಏಕ ವ್ಯಕ್ತಿ ಕೇಂದ್ರಿತ ಸುದ್ದಿಗಳ ಮೇಲೆ ನಿಗಾ ವಹಿಸಿ, ಪೇಯ್ಡ್ ಸುದ್ದಿಯ ಕುರಿತು ಎಚ್ಚರಿಕೆ ವಹಿಸಬೇಕು. ಚುನಾವಣೆಗಾಗಿ ಅಭ್ಯರ್ಥಿಗಳು, ರಾಜಕೀಯ ಪಕ್ಷಗಳು ಪತ್ರಿಕೆಗಳು, ಸುದ್ದಿವಾಹಿನಿಗಳು ಮುಂತಾದ ಮಾಧ್ಯಮಗಳ ಮೂಲಕ ನೀಡುವ ಜಾಹೀರಾತುಗಳ ಮೇಲೆ, ಮಾಧ್ಯಮಗಳಲ್ಲಿ ಬರುವ ಸುದ್ದಿಗಳ ಮೇಲೆ ಸಮಿತಿಯು ನಿಗಾ ವಹಿಸಬೇಕು. ಜಾಹೀರಾತು ವೆಚ್ಚದ ಮಾಹಿತಿಯನ್ನು ಆರ್‌ಓ, ಎಕ್ಸ್ಪೆಂಡಿಚರ್ ಅಧಿಕಾರಿಗೆ ಪ್ರತಿ ದಿನ ನೀಡಬೇಕು. ಸಾಮಾಜಿಕ ಮಾಧ್ಯಮಗಳಲ್ಲಿ ಪ್ರಸಾರವಾಗುವ ಜಾಹೀರಾತು, ಸುದ್ದಿಗಳನ್ನು ಗುರುತಿಸಿ ವರದಿ ಮಾಡಬೇಕು ಎಂದು ಮಾಧ್ಯಮ ಪ್ರಮಾಣೀಕರಣ ಹಾಗೂ ಮೇಲ್ವಿಚಾರಣಾ ಸಮಿತಿಯ ಕಾರ್ಯಗಳು, ಜವಾಬ್ದಾರಿಗಳ ಕುರಿತು ಜಿಲ್ಲಾಧಿಕಾರಿ ವೈಶಾಲಿ ಎಂ.ಎಲ್ ನಿರ್ದೇಶನ ನೀಡಿದರು.

ಸಭೆಯಲ್ಲಿ ಇವಿಎಂ ಮ್ಯಾನೇಜ್‌ಮೆಂಟ್, ಪೋಸ್ಟಲ್ ಬ್ಯಾಲೆಟ್, ಇಟಿಸಿ (ಚುನಾವಣಾ ತರಬೇತಿ ಪ್ರಮಾಣಪತ್ರ), ಅಂಗವಿಕಲರು ಹಾಗೂ 80 ವರ್ಷದ ಹಿರಿಯ ನಾಗರಿಕರ ಮನೆಗೆ ತೆರಳಿ ಮತದಾನದ ವ್ಯವಸ್ಥೆ ಕುರಿತು ಚರ್ಚಿಸಲಾಯಿತು.

ಸಭೆಯಲ್ಲಿ ಉಪ ಅರಣ್ಯ ಸಂರಕ್ಷಣಾಧಿಕಾರಿ ಲೇಖರಾಜ್, ಅಪರ ಜಿಲ್ಲಾಧಿಕಾರಿ ಅನ್ನಪೂರ್ಣ ಎಂ, ಜಂಟಿ ಕೃಷಿ ನಿರ್ದೇಶಕಿ ತಾರಾಮಣಿ, ಸಂಖ್ಯಾ ಸಂಗ್ರಹಣಾಧಿಕಾರಿ ಎ.ಎ. ಕಂಬಾಳಿಮಠ, ಲೀಡ್ ಬ್ಯಾಂಕ್ ಮ್ಯಾನೇಜರ್ ಜಬ್ಬಾರ ಅಹ್ಮದ್, ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಎಂ.ಎ. ರಡ್ಡೇರ ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು ಹಾಜರಿದ್ದರು.

> ಚುನಾವಣಾ ನೀತಿ ಸಂಹಿತೆ ಜಾರಿಯಾದಾಗಿನಿಂದ ಬ್ಯಾಂಕ್ ವಹಿವಾಟಿನ ಪರಿಶೀಲನೆ ನಡೆಸಲು ಬ್ಯಾಂಕ್‌ನ ನೋಡಲ್ ಅಧಿಕಾರಿಗಳ ಸಭೆಯನ್ನು ಜರುಗಿಸಬೇಕು. ಚೆಕ್‌ಪೋಸ್ಟ್‌ನಲ್ಲಿ ಬರುವ ವಾಹನಗಳ ತಪಾಸಣೆ ಕಾರ್ಯ ಶಿಸ್ತುಬದ್ಧವಾಗಿ ನಿರ್ವಹಿಸಬೇಕು. ಚುನಾವಣೆಗೆ ಸಂಬಂಧಿಸಿದಂತೆ ಏನಾದರೂ ಸಮಸ್ಯೆಗಳಿದ್ದರೆ ಚುನಾವಣಾ ಸಹಾಯವಾಣಿ ಸಂಖ್ಯೆ 1950ಕ್ಕೆ ಕರೆ ಮಾಡಿ ಸಲಹೆ ಪಡೆಯಬಹುದಾಗಿದೆ. ಒಟ್ಟಾರೆಯಾಗಿ ವಿವಿಧ ನೋಡಲ್ ಅಧಿಕಾರಿಗಳು ತಮಗೆ ವಹಿಸಿದ ಕರ್ತವ್ಯವನ್ನು ಕಟ್ಟುನಿಟ್ಟಾಗಿ ನಿರ್ವಹಿಸಿ ಚುನಾವಣಾ ಕಾರ್ಯ ಯಶಸ್ವಿಗೊಳಿಸಬೇಕು ಎಂದು ಜಿಲ್ಲಾಧಿಕಾರಿಗಳು ಸೂಚಿಸಿದರು.

## ಮಾಂಜಾದಾರ ಮಾರುವ ಅಂಗಡಿಗಳ ಮೇಲೆ ಪೊಲೀಸ್ ದಾಳಿ



■ ವಿಜಯಸಾಕ್ಷಿ ಸುದ್ದಿ, ಗದಗ

ಗಾಳಿಪಟ ಹಾರಿಸಿ ಅಜಾಗೂರಕತೆಯಿಂದ ಬಿಟ್ಟು ಹೋಗುವ ಮಾಂಜಾ ದಾರದಿಂದಾಗಿ ರಸ್ತೆಯಲ್ಲಿ ನಡೆದಾಡುವವರು ಮತ್ತು ಬೈಕ್ ಸವಾರರ ಜೀವ ಹಾನಿಯಾಗುವಂತ ಘಟನೆಗಳು ಸಂಭವಿಸುತ್ತಿರುವುದು ಕಂಡು ಬಂದ ಹಿನ್ನೆಲೆಯಲ್ಲಿ, ಪೊಲೀಸ್ ಉಪ–ಅಧೀಕ್ಷಕರಾದ ಜೆ.ಎಚ್. ಇನಾಮದಾರ್ ಅವರ ಮಾರ್ಗದರ್ಶನದಲ್ಲಿ ಗದಗ ಶಹರ ಚವಡಿ ಕೂಟ ಹತ್ತಿರ ಇರುವ ನ್ಯೂ ಫ್ಯಾನ್ಸಿ ಸ್ಟೋರ್, ಶಂಕರ ಗಂಗಾಸಾ ಮಲಜೀ, ದತ್ತು ಸ್ಟೋರ್ ಸರಸ್ವತಿ ದತ್ತುಸಾ ಮೇರವಾಡೆ, ಜವಹಾರ ಹನುಮಂತಸಾ ಮೇರವಾಡೆ ಇವರ ಅಂಗಡಿಗೆ ದಾಳಿ ಮಾಡಿ ಸುಮಾರು 50 ಬಂಡಲ್ ಮಾಂಜಾದಾರ, ಪ್ಲಾಸ್ಟಿಕ್ ದಾರವನ್ನು ವಶಪಡಿಸಿಕೊಂಡು ಅವರಿಗೆ ಮುಂದೆ ಈ ತರಹದ ಯಾವುದೇ ದಾರಗಳನ್ನು ಮಾರದಿರುವಂತೆ ಎಚ್ಚರಿಕೆ ನೀಡಲಾಯಿತು.

ಗದಗ ಶಹರ ಪೊಲೀಸ್ ಠಾಣೆಯ ಪಿಐ ಡಿ.ಬಿ. ಪಾಟೀಲ್, ಪಿಎಸ್‌ಐ ಎಚ್.ಕೆ. ಪಾಟೀಲ್, ಎನ್.ಜಿ. ಭರಮಗೌಡರ, ಎಚ್.ಐ. ಯಡಿಯಾಪೂರ, ಎಮ್.ಬಿ. ವಡ್ಡಟ್ಟಿ, ಎಮ್.ಡಿ. ಕವಡಕಿ, ಎ.ಆರ್. ಕವಲೂರ, ಹನುಮಂತ ಮಡ್ಡಿ ಮುಂತಾದವರಿದ್ದರು.

## ಬ್ರಾಹ್ಮಣ, ಆರ್ಯ ವೈಶ್ಯ ಸಮಾಜದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ಬಿಡುಗಡೆ

# ಉತ್ತಮ ಭವಿಷ್ಯ ರೂಪಿಸಿಕೊಳ್ಳಿ

■ ವಿಜಯಸಾಕ್ಷಿ ಸುದ್ದಿ, ಬೆಂಗಳೂರು

ಬ್ರಾಹ್ಮಣ ಹಾಗೂ ಆರ್ಯ ವೈಶ್ಯ ಸಮಾಜದ 4067 ವಿದ್ಯಾರ್ಥಿಗಳಿಗೆ ಸಚಿವ ಕೃಷ್ಣ ಬೈರೇಗೌಡ 5.53 ಕೋಟಿ ರೂ ವಿದ್ಯಾರ್ಥಿ ವೇತನವನ್ನು ವಿದ್ಯಾರ್ಥಿಗಳ ಖಾತೆಗೆ ನೇರ ವರ್ಗಾವಣೆಗೊಳಿಸಿದರು.

ಹಣ ವರ್ಗಾವಣೆ ನಂತರ ವಿದ್ಯಾರ್ಥಿಗಳಿಗೆ ಶುಭ ಕೋರಿದ ಸಚಿವರು, ಆರ್ಥಿಕವಾಗಿ ಹಿಂದುಳಿದಿರುವ ವಿದ್ಯಾರ್ಥಿಗಳಿಗೆ ಅನುಕೂಲವಾಗಲಿ ಎಂಬ ಕಾರಣಕ್ಕೆ ಬ್ರಾಹ್ಮಣ ಮತ್ತು ಆರ್ಯ ವೈಶ್ಯ ಅಭಿವೃದ್ಧಿ ನಿಗಮದಿಂದ ವಿದ್ಯಾರ್ಥಿ ವೇತನ ನೀಡಲಾಗುತ್ತಿದೆ. ಪದವಿಪೂರ್ವ, ಪದವಿ, ಸ್ನಾತಕೋತ್ತರ ಪದವಿ ಹಾಗೂ ವೃತ್ತಿಪರ ಕೋರ್ಸ್




ಅಧ್ಯಯನ ನಡೆಸುತ್ತಿರುವ ಎರಡೂ ಸಮಾಜದ 4 ಸಾವಿರಕ್ಕೂ ಅಧಿಕ ವಿದ್ಯಾರ್ಥಿಗಳಿಗೆ ಈಗಾಗಲೇ ನೇರ ನಗದು ವರ್ಗಾವಣೆ ಮೂಲಕ ಬ್ಯಾಂಕ್ ಖಾತೆಗೆ ಹಣ ಜಮಾ ಮಾಡಲಾಗಿದೆ. ವಿದ್ಯಾರ್ಥಿಗಳು ಇದರ ಸದುಪಯೋಗ ಪಡೆದುಕೊಂಡು ಉತ್ತಮ ಭವಿಷ್ಯ ರೂಪಿಸಿಕೊಳ್ಳಬೇಕು ಎಂದು ಹಾರೈಸಿದರು.

2023–24ನೇ ಸಾಲಿನಲ್ಲಿ ಕರ್ನಾಟಕ ಆರ್ಯ ವೈಶ್ಯ ಸಮುದಾಯ ಅಭಿವೃದ್ಧಿ ನಿಗಮದಿಂದ 1,357 ವಿದ್ಯಾರ್ಥಿಗಳಿಗೆ ನೇರ ನಗದು ವರ್ಗಾವಣೆ ಮೂಲಕ ವಿದ್ಯಾರ್ಥಿ ವೇತನ ಬಿಡುಗಡೆಗೊಳಿಸಲಾಗಿದೆ. ವೃತ್ತಿಪರ ಪದವಿ ಮತ್ತು ಸ್ನಾತ್ತಕೋತ್ತರ ಪದವಿಗಳಿಗೆ ಗರಿಷ್ಠ 1.20 ಲಕ್ಷ ರೂ.ವರೆಗೆ ಹಾಗೂ ಪದವಿ–ಪದವಿಪೂರ್ವ ವಿದ್ಯಾರ್ಥಿಗಳಿಗೆ ಗರಿಷ್ಠ 30 ಸಾವಿರ ರೂ.ಗಳವರೆಗೆ ವಿದ್ಯಾರ್ಥಿ ವೇತನ ನೀಡಲಾಗಿದೆ. ಒಟ್ಟಾರೆ ಈ ಸಾಲಿನಲ್ಲಿ 1357 ವಿದ್ಯಾರ್ಥಿಗಳಿಗೆ 1.75 ಕೋಟಿ ರೂ. ಹಣವನ್ನು ನೇರ ನಗದು ವರ್ಗಾವಣೆ ಮೂಲಕ ವಿದ್ಯಾರ್ಥಿಗಳ ಖಾತೆಗೆ ಜಮಾ ಮಾಡಲಾಗಿದೆ.

ಕರ್ನಾಟಕ ರಾಜ್ಯ ಬ್ರಾಹ್ಮಣ ಅಭಿವೃದ್ಧಿ ಮಂಡಳಿಯ ವ್ಯವಸ್ಥಾಪಕ ನಿರ್ದೇಶಕಿ ಪೂರ್ಣಿಮಾ ಪಿ.ವಿ ಹಾಗೂ ಕರ್ನಾಟಕ ಆರ್ಯ ವೈಶ್ಯ ಸಮುದಾಯ ಅಭಿವೃದ್ಧಿ ನಿಗಮದ ವ್ಯವಸ್ಥಾಪಕ ನಿರ್ದೇಶಕಿ ದೀಪಶ್ರೀ. ಕೆ ಉಪಸ್ಥಿತರಿದ್ದರು.

> 2023–24ನೇ ಸಾಲಿನಲ್ಲಿ ಕರ್ನಾಟಕ ಬ್ರಾಹ್ಮಣ ಅಭಿವೃದ್ಧಿ ಮಂಡಳಿಯಿಂದ 2710 ವಿದ್ಯಾರ್ಥಿಗಳಿಗೆ ನೇರ ನಗದು ವರ್ಗಾವಣೆ ಮೂಲಕ ವಿದ್ಯಾರ್ಥಿ ವೇತನ ಬಿಡುಗಡೆಗೊಳಿಸಲಾಗಿದೆ. ಪದವಿಪೂರ್ವ (ಪಿಯುಸಿ) ವ್ಯಾಸಾಂಗ ಮಾಡುತ್ತಿರುವ 758 ಬ್ರಾಹ್ಮಣ ವಿದ್ಯಾರ್ಥಿಗಳಿಗೆ 15 ಸಾವಿರ ರೂ.ನಂತೆ 113.70 ಕೋಟಿ ರೂ.ಗಳನ್ನು ವರ್ಗಾವಣೆ ಮಾಡಲಾಗಿದೆ. ವೃತ್ತಿಪರ ಕೋರ್ಸ್ ವ್ಯಾಸಾಂಗದ 1952 ವಿದ್ಯಾರ್ಥಿಗಳಿಗೆ ಒಟ್ಟು ಶುಲ್ಕದ 2/3 ಭಾಗ ವಿದ್ಯಾರ್ಥಿ ವೇತನವಾಗಿ 2.65 ಕೋಟಿ ರೂ.ನಂತೆ ಒಟ್ಟು 3.78 ಕೋಟಿ ರೂ. ನಿಗಮದ ಮೂಲಕ ಪಾವತಿಸಲಾಗಿದೆ.

## ಸರಕಾರಿ ಶಾಲೆಗಳಲ್ಲಿ ಗುಣಾತ್ಮಕ ಶಿಕ್ಷಣ



**■ವಿಜಯಸಾಕ್ಷಿ ಸುದ್ದಿ, ಮುಳಗುಂದ**

ಸರಕಾರಿ ಶಾಲೆಗಳಲ್ಲಿ ನುರಿತ ಶಿಕ್ಷಕರು ಇರುವುದರಿಂದ ಗುಣಾತ್ಮಕ ಶಿಕ್ಷಣ ದೊರೆಯುತ್ತದೆ ಎಂದು ಸರಕಾರಿ ಹಿರಿಯ ಪ್ರಾಥಮಿಕ(ಡಿಪಿಇಪಿ)ಶಾಲೆಯ ಎಸ್‌ಡಿಎಂಸಿ ಅಧ್ಯಕ್ಷ ಮಾಹಾಂತೇಶ ಕೆಂಚನಾಯ್ಕರ ಹೇಳಿದರು.

ಅವರು ಪಟ್ಟಣದ ಸರಕಾರಿ ಹಿರಿಯ ಪ್ರಾಥಮಿಕ (ಡಿಪಿಇಪಿ)ಶಾಲೆಯ ವಾರ್ಷಿಕ ಸ್ನೇಹ ಸಮ್ಮೇಳನ ಹಾಗೂ 7ನೇ ತರಗತಿ ವಿದ್ಯಾರ್ಥಿಗಳ ಬೀಳ್ಕೊಡುಗೆ ಸಮಾರಂಭ ಉದ್ಘಾಟಿಸಿ ಮಾತನಾಡಿದರು.

ಸರಕಾರಿ ಶಾಲೆಯಲ್ಲಿ ಕಲಿತ ಲಕ್ಷಾಂತರ ವಿದ್ಯಾರ್ಥಿಗಳು ಇಂದು ಹಲವಾರು ಕ್ಷೇತ್ರಗಳಲ್ಲಿ ಉನ್ನತ ಹುದ್ದೆಯಲಿದ್ದು, ಸರಕಾರಿ ಶಾಲೆಗಳಲ್ಲಿ ಸರಕಾರದಿಂದ ಕ್ಷೀರ ಭಾಗ್ಯ, ಬಿಸಿ ಊಟ, ಬಾಳೆಹಣ್ಣು, ಚಿಕ್ಕಿ, ಶೂ ಭಾಗ್ಯ, ಸಮವಸ್ತ್ರ ಎಲ್ಲವೂ ಉಚಿತವಾಗಿ ದೊರೆಯುವುದರ ಜೊತೆಯಲ್ಲಿ ಉತ್ತಮ ಶಿಕ್ಷಣ ದೊರೆಯುತ್ತಿದ್ದು, ನಮ್ಮ ಶಾಲೆಯಲ್ಲಿ ಶುದ್ಧ ಕುಡಿಯುವ ನೀರು, ಶೌಚಾಲಯ, ಕಂಪ್ಯೂಟರ್ ತರಬೇತಿ, ಗುಣಮಟ್ಟದ ಕೊಠಡಿ ಹೊಂದಿದೆ ಎಂದರು.

ಶಾಲಾ ಪ್ರಧಾನ ಗುರು ಪಿ.ಸಿ. ಪಾಟೀಲ್, ಎಂ.ಎಸ್. ಶಿರಹಟ್ಟಿ, ಜಿ.ಆರ್. ಹಲಗೇರಿ, ಯು.ಐ. ಭಜಂತ್ರಿ, ಎ.ಬಿ. ಸರ್ವಿ, ಎಸ್.ಎಂ. ಬಳಗಾನೂರ, ಎಸ್.ಎಚ್. ಚನ್ನದಾಸರ, ಎಸ್.ಎಫ್. ಬಾಳಿಹಳ್ಳಿಮಠ, ಎ.ಎಸ್. ಹಸಬಿ, ಎ.ಎಚ್. ದುರ್ಗಿಗುಡಿ, ಮಾಹಾಂತೇಶ ನೀಲಗುಂದ, ಹೊನ್ನಪ್ಪ ನೀಲಗುಂದ, ಈರಣ್ಣ ಕೊಂಡಿಕೊಪ್ಪ, ಮಾಹಾದೇವಪ್ಪ ಹುಬ್ಬಳ್ಳಿ, ಮಾಹಾದೇವಪ್ಪ ಗಡಾದ ಮುಂತಾದವರಿದ್ದರು.

### ತಾಲೂಕು ಮಟ್ಟದ ಅಧಿಕಾರಿಗಳಿಗೆ ಒಂದು ದಿನದ ತರಬೇತಿ ಕಾರ್ಯಕ್ರಮ

# ಭ್ರೂಣಹತ್ಯೆ ಗಂಭೀರವಾದ ಅಪರಾಧ

**■ವಿಜಯಸಾಕ್ಷಿ ಸುದ್ದಿ, ಧಾರವಾಡ**

ಸಮಾಜವು ಹೆಣ್ಣುಮಕ್ಕಳನ್ನು ಅನಿಷ್ಠ-ಕನಿಷ್ಠವೆಂದು ಪುರುಷರಿಗಿಂತ ಕೀಳಾಗಿ ನಡೆಸಿಕೊಳ್ಳುತ್ತಿದೆ. ಮೂಢನಂಬಿಕೆಯಿಂದಾಗಿ ಅಗೌರವಕ್ಕೆ ಒಳಪಡಿಸಿದ್ದರಿಂದ ಹೆಚ್ಚಿನ ಭ್ರೂಣ ಹತ್ಯೆಗಳು ನಡೆಯುತ್ತಿವೆ ಎಂದು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಹಾಗೂ ಹಿರಿಯ ಸಿವಿಲ್ ಜಿಲ್ಲಾ ನ್ಯಾಯಾಧೀಶ ಪರಶುರಾಮ ಎಫ್.ದೊಡ್ಡಮನಿ ಹೇಳಿದರು.




ಅವರು ಬುಧವಾರ ಬೆಳಿಗ್ಗೆ ಜಿಲ್ಲಾ ಪಂಚಾಯತ ಸಭಾಂಗಣದಲ್ಲಿ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಜಿಲ್ಲಾಡಳಿತ, ಜಿಲ್ಲಾ ಪಂಚಾಯತ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಾಗೂ ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ವತಿಯಿಂದ ಆಯೋಜಿಸಲಾದ ಬೇಟಿ ಬಚಾವೋ-ಬೇಟಿ ಪಡಾವೋ ಯೋಜನೆಯಡಿಯಲ್ಲಿ ಜಿಲ್ಲಾ ಹಾಗೂ ತಾಲೂಕು ಮಟ್ಟದ ಅಧಿಕಾರಿಗಳಿಗೆ ಬಾಲ್ಯವಿವಾಹ ನಿಷೇಧ ಕಾಯ್ದೆ, ಪೋಕ್ಸೋ ಕಾಯ್ದೆ, ಮಹಿಳಾ ಅನೈತಿಕ ಸಾಗಾಣಿಕೆ ಹಾಗೂ ಪಿಎನ್‌ಡಿಟಿ-ಆ್ಯಕ್ಟ್ 1994ರ ಕುರಿತು ಒಂದು ದಿನದ ತರಬೇತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಮಹಿಳೆಯರನ್ನು ನಮ್ಮ ಭಾರತದ ಸಂಸ್ಕೃತಿಯಲ್ಲಿ ಗೌರವಿಸಿ, ನದಿ ಹಾಗೂ ಭೂಮಿತಾಯಿಗೆ ಹೋಲಿಸಲಾಗಿದೆ. ಸಮಾಜದಲ್ಲಿ ಯಾರನ್ನು ಗೌರವಿಸಬೇಕು, ಯಾರನ್ನು ಆದರ್ಶವಾಗಿರಿಸಿಕೊಳ್ಳಬೇಕೋ ಅವರನ್ನು ನಾವು ಮೂಲೆಗೆ ತಳ್ಳಿದ್ದೇವೆ. ಸುಳ್ಳುಗಳನ್ನು ಸೃಷ್ಟಿಸಿ ಅದಕ್ಕೆ ವೈಭವೀಕರಣ ಮಾಡಿ ಅದನ್ನೇ ವಿಜೃಂಭಿಸಿ ಜನರ ತಲೆಯೊಳಗೆ ಅವೈಜ್ಞಾನಿಕ, ಮೂಢನಂಬಿಕೆಗಳನ್ನು ತುಂಬಿ ಮಹಿಳೆಯರನ್ನು ಗೌರವ ಸ್ಥಾನದಿಂದ ದೂರವಿಡಲಾಗಿದೆ ಎಂದು ಹೇಳಿದರು.

ಜನರು ಗ್ರಹಣದ ಸಂದರ್ಭದಲ್ಲಿ ಹೆಚ್ಚಾಗಿ ಮೂಢನಂಬಿಕೆಗೆ ಒತ್ತು ಕೊಟ್ಟು, ಮನೆಯಲ್ಲಿ ನೀರು ಕುಡಿಯಬಾರದು, ಊಟ ಮಾಡಬಾರದು, ಮನೆಯ ಹೊರಗಡೆ ಹೋಗಬಾರದು, ಗ್ರಹಣದ ಸಂದರ್ಭದಲ್ಲಿ ಮನೆಯಲ್ಲಿರುವ ನೀರು ಚೆಲ್ಲುವುದು ಎಂಬ ಹಲವಾರು ಮೂಢನಂಬಿಕೆಗಳ ಜೊತೆ ವಾಸ್ತವದ ವಿರುದ್ಧವಾಗಿ ನಡೆದುಕೊಳ್ಳುತ್ತಾರೆ. ಇಂದಿನ ಯುಗದಲ್ಲಿ ಆಕಾಶಕ್ಕೆ ರಾಕೆಟ್ ಹಾರಿಸುತ್ತೇವೆ, ಮಂಗಳ ಗ್ರಹಕ್ಕೆ ಮಾನವನನ್ನು ಕಳಿಸುತ್ತಿದ್ದೇವೆ. ಹೀಗೆ ತಂತ್ರಜ್ಞಾನಗಳು ಮುಂದುವರೆದರು ಸಹ ಜನರಲ್ಲಿರುವ ಮೌಢ್ಯತೆಗಳು ಕಡಿಮೆಯಾಗಲು ಸಾದ್ಯವಾಗಿಲ್ಲ. ಮಹಿಳೆಯರು ಸಮಾಜದಲ್ಲಿ ನಡೆಯುವಂತಹ ಘಟನೆಗಳಿಗೆ ಕಿವಿಗೊಡದೆ ವೈಜ್ಞಾನಿಕವಾಗಿ ಚಿಂತಿಸಿ, ಜೀವನ ನಡೆಸುವುದು ಪ್ರಮುಖವಾಗಿದೆ ಎಂದರು.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಡಾ.ಶಶಿ ಪಾಟೀಲ ಮಾತನಾಡಿ, ಹಳ್ಳಿಗಳಲ್ಲಿ ಬಾಲ್ಯ ವಿವಾಹವು ಹೆಚ್ಚಾಗಿ ಕಂಡು ಬರುತ್ತಿದೆ. ಒಂದು ಸಾವಿರ ಪುರುಷರಿಗೆ 937 ಹೆಣ್ಣು ಮಕ್ಕಳ ಸಂಖ್ಯೆ ಇದೆ. ಹಳ್ಳಿಗಳಲ್ಲಿ, ದೊಡ್ಡ ಆಸ್ಪತ್ರೆಗಳಲ್ಲಿ ಹೆಚ್ಚಾಗಿ ಹೆಣ್ಣು ಭ್ರೂಣ ಹತ್ಯೆ ಕಂಡುಬರುತ್ತಿದೆ. ಹೆಣ್ಣು ಭ್ರೂಣ ಹತ್ಯೆಯ ಬಗ್ಗೆ ಜನರಲ್ಲಿ ಜಾಗೃತಿಯನ್ನು ಮೂಡಿಸಲಾಗುತ್ತಿದೆ. ಹೆಣ್ಣು ಮಕ್ಕಳು ಸಮಾಜದಲ್ಲಿ ಉತ್ತಮವಾದ ಸ್ಥಾನಮಾನವನ್ನು ಹೊಂದಿ, ಗುರುತಿಸಿಕೊಳ್ಳಲು ಅವಕಾಶ ನೀಡಬೇಕು ಎಂದರು.

ಜಿಲ್ಲಾ ಪಂಚಾಯತ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಸ್ವರೂಪ ಟಿ.ಕೆ. ಕಾರ್ಯ್ರಮದ ಅಧ್ಯಕ್ಷತೆ ವಹಿಸಿದ್ದರು. ಹರೀಶ್ ಜೋಗಿ, ನೂರಜಹಾನ ಕಿಲ್ಲೇದಾರ, ತನುಜಾ ಕೆ.ಎನ್ ಉಪಸ್ಥಿತರಿದ್ದರು. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕಿ ಪದ್ಮಾವತಿ ಜಿ ಅವರು ಕಾರ್ಯಕ್ರಮವನ್ನು ನಿರೂಪಿಸಿ, ವಂದಸಿದರು.

ಇತ್ತೀಚಿನ ದಿನಗಳಲ್ಲಿ ಹೆಚ್ಚು ಭ್ರೂಣಹತ್ಯೆ ಕಂಡುಬರುತ್ತಿದೆ. ಭ್ರೂಣಹತ್ಯೆ ಮಾಡುವುದು ಕೊಲೆಯ ಪ್ರಕರಣಕಿಂತ ಗಂಭೀರವಾದ ಅಪರಾಧವಾಗಿದೆ. ಬಸವಣ್ಣನವರು ಸಮಾಜದಲ್ಲಿ ನಡೆಯುತ್ತಿದ್ದ ಗಂಡು-ಹೆಣ್ಣು ಎಂಬ ಲಿಂಗ ತಾರತಮ್ಯದ ವಿರುದ್ಧ 900 ವರ್ಷಗಳ ಹಿಂದೆಯೇ ಸಮಾನತೆಗಾಗಿ ಶ್ರಮಿಸಿದರು. ಪ್ರತಿಯೊಬ್ಬರೂ ಬಸವಣ್ಣನವರ ಆದರ್ಶಗಳನ್ನು ಪಾಲಿಸಬೇಕು. ಮನೆಯಲ್ಲಿ ಮಕ್ಕಳಿಗೆ ಬಸವಣ್ಣನವರ ವಚನ ಮತ್ತು ಕತೆಗಳನ್ನು ಹೇಳಬೇಕು. ಆಗ ಮಾತ್ರ ವೈಜ್ಞಾನಿಕವಾಗಿ ಜೀವಿಸಲು ಸಾಧ್ಯ. ಭಾರತದಲ್ಲಿ ಮೊದಲ ಶಿಕ್ಷಕಿ ಸಾವಿತ್ರಿಭಾಯಿ ಪುಲೆ ಅವರು ಶಿಕ್ಷಣದಿಂದ ವಂಚಿತರಾದ ಹೆಣ್ಣು ಮಕ್ಕಳಿಗೆ ದೇವಾಲಯ, ಗುರುಕುಲ, ಮರದ ಕೆಳಗೆ ಶಿಕ್ಷಣ ನೀಡುತ್ತಿದ್ದರು. ಅವರ ಆದರ್ಶ ತತ್ವಗಳನ್ನು ಇಂದಿಗೂ ಮಹಿಳೆಯರು ಪಾಲಿಸಬೇಕು ಎಂದು ಪರಶುರಾಮ ಎಫ್.ದೊಡ್ಡಮನಿ ತಿಳಿಸಿದರು.



## ಬಿಜೆಪಿಯಿಂದ ಶಕ್ತಿವಂದನಾ ಕಾರ್ಯಕ್ರಮ




**■ವಿಜಯಸಾಕ್ಷಿ ಸುದ್ದಿ, ಗದಗ**

ಭಾರತೀಯ ಜನತಾ ಪಾರ್ಟಿ ಗದಗ ಜಿಲ್ಲಾ ವತಿಯಿಂದ ಶಕ್ತಿವಂದನಾ ಕಾರ್ಯಕ್ರಮ ನೆರವೇರಿತು.

ಈ ಸಂದರ್ಭದಲ್ಲಿ ರೈತ ಮೋರ್ಚಾ ರಾಜ್ಯ ಉಪಾಧ್ಯಕ್ಷೆ ಭಾರತಿ ಅಳಗಂಡಿ, ಜಿಲ್ಲಾ ಮಹಿಳಾ ಮೋರ್ಚಾ ಅಧ್ಯಕ್ಷೆ ನಿರ್ಮಲಾ ಕೊಳ್ಳಿ, ಜಿಲ್ಲಾ ಪ್ರಧಾನ ಕಾರ್ಯದರ್ಶಿಗಳಾದ ಲಿಂಗರಾಜ ಪಾಟೀಲ, ಪಕ್ಕಿರೇಶ ರಟ್ಟಿಹಳ್ಳಿ, ಅನಿಲ ಅಬ್ಬಿಗೇರಿ, ಅಶ್ವಿನಿ ಜಗತಾಪ, ರತ್ನಾ ಕುರಗೋಡ, ವಿಜಯಲಕ್ಷ್ಮೀ ಮಾನ್ವಿ, ಸ್ವಾತಿ ಅಕ್ಕಿ, ಕವಿತಾ ಬಂಗಾರಿ, ಸಾವಿತ್ರಿ ಪಾಟೀಲ, ಯೋಗೇಶ್ವರಿ ಭಾವಿಕಟ್ಟಿ, ಶಾಂತಾ ತಿಮ್ಮಾಪೂರ, ರಾಜೇಶ್ವರಿ ಹಾದಿಮನಿ ಸೇರಿದಂತೆ ಪ್ರಮುಖರು ಉಪಸ್ಥಿತರಿದ್ದರು.

## ಬಿಎಸ್‌ವೈ ಜನ್ಮದಿನ ಆಚರಣೆ




**■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ**

ಮಾಜಿ ಸಿಎಂ ಬಿ.ಎಸ್. ಯಡಿಯೂರಪ್ಪನವರ 81ನೇ ಜನ್ಮದಿನವನ್ನು ಬಿಜೆಪಿ ಪಕ್ಷದಿಂದ ಮಂಗಳವಾರ ಪಟ್ಟಣದಲ್ಲಿ ಆಚರಿಸಲಾಯಿತು. ಬೆಳಿಗ್ಗೆ ದೇವಸ್ಥಾನಗಳಲ್ಲಿ ಪೂಜೆ ಸಲ್ಲಿಸಿದ ಬಿಜೆಪಿ ಕಾರ್ಯಕರ್ತರು ಜಿ.ಎಫ್. ಉಪನಾಳ ಪ್ರತಿಷ್ಠಾನದ ವೃದ್ಧಾಶ್ರಮದಲ್ಲಿನ ವೃದ್ಧರಿಗೆ ಹಣ್ಣು-ಹಂಪಲು ವಿತರಿಸಿದರು.

ಶಿರಹಟ್ಟಿ ಮಂಡಳ ಅಧ್ಯಕ್ಷ ಸುನೀಲ ಮಹಾಂತಶೆಟ್ಟರ ಮಾತನಾಡಿ, ಬಡವರ ಬಂಧು, ರೈತ ನಾಯಕ ಮಾಜಿ ಸಿಎಂ ಬಿ.ಎಸ್.ವೈ ಈ ನಾಡು ಕಂಡ ಅಪ್ರತಿಮ ನಾಯಕರಾಗಿದ್ದಾರೆ. ಬಿಜೆಪಿ ಪಕ್ಷವನ್ನು ಕೆಳ ಹಂತದಿಂದ ಸಂಘಟಿಸಿ ಇಂದು ರಾಷ್ಟ್ರಮಟ್ಟಕ್ಕೇರಿಸುವಲ್ಲಿ ಇವರ ಪಾತ್ರ ಮುಖ್ಯವಾಗಿದೆ ಎಂದರು.

ಈ ಸಂದರ್ಭದಲ್ಲಿ ಬಿ.ಡಿ. ಪಲ್ಲೇದ, ನೀಲಪ್ಪ ಹತ್ತಿ, ನಿಂಗಪ್ಪ ಬನ್ನಿ, ಗಂಗಾಧರ ಮೆಣಸಿನಕಾಯಿ, ದುಂಡೇಶ ಕೊಟಗಿ, ವಿಜಯ ಕುಂಬಾರ, ಪ್ರವೀಣ ಬೋಮಲೆ, ರುದ್ರಪ್ಪ ಉಮಚಗಿ, ಶಕ್ತಿ ಕತ್ತಿ, ನವೀನ ಬೆಳ್ಳಟ್ಟಿ, ವುಳವೇಶ ಪಾಟೀಲ, ಪ್ರಕಾಶ ಉಪನಾಳ, ಸಂತೋಷ ಜಾವೂರ, ವಿಶಾಲ ಬಟಗುರ್ಕಿ, ವಿರೇಶ ಸಾಸಲವಾಡ, ಭೀಮಣ್ಣ ಯಂಗಾಡಿ, ಮಂಜುನಾಥ ಉಳ್ಳಾಗಡ್ಡಿ, ಜಹೀರ್ ಮೋಮಿನ್, ಮಲ್ಲಿಕಾರ್ಜುನ ನೀರಾಲೋಟಿ, ಈರಣ್ಣ ಅಕ್ಕೂರ, ಬಸವರಾಜ ಚಕ್ರಸಾಲಿ ಮುಂತಾದವರಿದ್ದರು.

## ಯಶಸ್ವಿನಿ ಆರೋಗ್ಯ ರಕ್ಷಣಾ ಯೋಜನೆ: ನೋಂದಣಿಗೆ ಅವಕಾಶ

**■ವಿಜಯಸಾಕ್ಷಿ ಸುದ್ದಿ, ಗದಗ**

2023-24ನೇ ಸಾಲಿಗೆ ಸಹಕಾರ ಇಲಾಖೆಯಿಂದ ಯಶಸ್ವಿನಿ ಆರೋಗ್ಯ ರಕ್ಷಣಾ ಯೋಜನೆಯನ್ನು ಜಾರಿಗೊಳಿಸಲಾಗಿದೆ. ಜನವರಿ 1ರಿಂದ ಸದರಿ ಯೋಜನೆಯಲ್ಲಿ ಸದಸ್ಯರಾಗಿ ನೋಂದಾಯಿಸಲು ಪ್ರಾರಂಭವಾಗಿದೆ. ಮಾರ್ಚ್ 5 ರಂದು ಯಶಸ್ವಿನಿ ಯೋಜನೆಯ ವಿಶೇಷವಾದ ದಿನ ಎಂದು ಪರಿಗಣಿಸಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು, ಪ್ರಾಥಮಿಕ ಸಹಕಾರ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್‌ಗಳು, ತಾಲೂಕಾ ಒಕ್ಕಲುತನ ಹುಟ್ಟುವಳಿ ಮಾರಾಟ ಸಹಕಾರ ಸಂಘಗಳು, ಹಾಲು ಉತ್ಪಾದಕರ ಸಹಕಾರ ಸಂಘಗಳು ಹಾಗೂ ಇತರೆ ಎಲ್ಲಾ ಸಹಕಾರ ಸಂಘಗಳ ಮುಖ್ಯ ಕಾರ್ಯನಿರ್ವಾಹಕರು/ವ್ಯವಸ್ಥಾಪಕರು ತಮ್ಮ ಸಂಘದ ಮುಂದೆ ಬೆಳಿಗ್ಗೆ 10 ಗಂಟೆಯಿಂದ ಮಧ್ಯಾಹ್ನ 2 ಗಂಟೆಯವರೆಗೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಸದಸ್ಯರನ್ನು ಉಚಿತವಾಗಿ ನೋಂದಾಯಿಸುವುದು. ಮತ್ತು ಅದೇ ದಿನ ಮಧ್ಯಾಹ್ನ 2-30 ಗಂಟೆಯಿಂದ ಎಲ್ಲಾ ಸಾಮಾನ್ಯ ಸದಸ್ಯರನ್ನು ನೋಂದಾಯಿಸುವವರೆಗೂ ಮತ್ತು ಈಗಾಗಲೇ ನೋಂದಾಯಿಸಿಕೊಂಡ ಸದಸ್ಯರನ್ನು ನವೀಕರಣಗೊಳಿಸುವುದು ಮತ್ತು ಹೊಸದಾಗಿ ನೋಂದಾಯಿಸುವವರನ್ನು ನೊಂದಾಯಿಸಿಕೊಳ್ಳಬೇಕು.

ಹೆಚ್ಚಿನ ಮಾಹಿತಿಗಾಗಿ ಸಹಕಾರ ಸಂಘಗಳ ಉಪ ನಿಬಂಧಕರ ಕಚೇರಿ, ಜಿಲ್ಲಾಡಳಿತ ಭವನ, ಕೊಠಡಿ ಸಂಖ್ಯೆ-125 ಹಾಗೂ ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಎ.ಪಿ.ಎಂ.ಸಿ. ಯಾರ್ಡ್, ಎಸ್.ಬಿ.ಆಯ್ ಮುಖ್ಯ ಶಾಖೆ ಎದುರಿಗೆ, ಗದಗ, ದೂರವಾಣಿ ಸಂಖ್ಯೆ-08372-238598 ಹಾಗೂ ತಾಲೂಕಾ ಸಹಕಾರ ಅಭಿವೃದ್ಧಿ ಅಧಿಕಾರಿ, ನರಗುಂದ-8660099227, ಶಿರಹಟ್ಟಿ-9739247088, ರೋಣ-9538198110, ಮುಂಡರಗಿ-8088386791, ಗದಗ-9945187724 ಇವರನ್ನು ಸಂಪರ್ಕಿಸಬಹುದಾಗಿದೆ.

### ಶಿಕ್ಷಕ ಡಿ.ಜಿ. ಕುಲಕರ್ಣಿ ಸೇವಾ ನಿವೃತ್ತಿ ಹೊಂದುತ್ತಿರುವ ನಿಮಿತ್ತ ವಿಶೇಷ ಲೇಖನ

# ಕಾಯಕ ನಿಷ್ಠೆಯ ಆದರ್ಶ ಶಿಕ್ಷಕ

ಆದರ್ಶ ಶಿಕ್ಷಕರಾಗಿ ಸೇವೆಗೈದು ಇದೀಗ ನಿವೃತ್ತರಾಗುವುದು ಎಂದರೆ ಮನಸ್ಸಿಗೆ ತುಂಬಾ ಕಸಿವಿಸಿಯಾಗುತ್ತದೆ. ಸದಾ ಅರಳುವ ಹೂಗಳಂತಿರುವ ಮಕ್ಕಳ ಜೊತೆಗೆ ಕಾಲ ಕಳೆದು ಇದೀಗ ಮನೆಯಲ್ಲಿ ಕೂರುವುದು ಎಂದರೆ ಊಹಿಸಿಕೊಳ್ಳಲು ಸಾಧ್ಯವಿಲ್ಲ ಅಲ್ಲವೇ. ಅದರಲ್ಲೂ ರಿಟೈರ್ಡ್ ಆದರೂ ಟೈರ್ಡ್ ಆಗದೆ ಇರುವವರು ನಿಜವಾದ ರೋಲ್ ಮಾಡೆಲ್. ತಮ್ಮ ಸುದೀರ್ಘವಾದ 34 ವರ್ಷಗಳ ಸೇವಾ ಅವಧಿಯಲ್ಲಿ ಕೇವಲ ಎರಡು ದಿನ ಮಾತ್ರ ಬಸ್ಸಿನ ಅನಾನೂಕೂಲದಿಂದ ಶಾಲೆಗೆ ತಡವಾಗಿ ಬಂದಿರುವುದು ಅವರಲ್ಲಿನ ಸಮಯಪ್ರಜ್ಞೆ, ಸಮಯ ಪಾಲನೆಯ ಮಹತ್ವವನ್ನು ತಿಳಿಸುತ್ತದೆ.

ದತ್ತಣ್ಣ ಸರ್ ಅವರ ಸೇವೆ ವಿಶೇಷ ಎನ್ನಲು ಮತ್ತೊಂದು ವಿಶಿಷ್ಟ ಕಾರಣವಿದೆ. ವಿಶೇಷ ಚೇತನ (ಕಿವುಡ ಮತ್ತು ಮೂಗ) ಮಕ್ಕಳಿಗೆ ಅವರ ಸಂಜ್ಞಾ ಭಾಷೆಯಲ್ಲಿ ಕಲಿಸುವುದು ಇದೆಯಲ್ಲ, ಅದು ನಿಜಕ್ಕೂ ಸಾಧನೆಯ ಸಾಹಸವೇ ಸರಿ. ಡಿ.ಜಿ. ಕುಲಕರ್ಣಿಯವರು 1990ರಲ್ಲಿ ಗಜೇಂದ್ರಗಡ ತಾಲೂಕಿನ ನರೇಗಲ್ ಶ್ರೀ ಅನ್ನದಾನ ವಿಜಯ ವಿದ್ಯಾ ಪ್ರಸಾರಕ ಸಮಿತಿಯ ಕಿವುಡ ಮಕ್ಕಳ ವಸತಿಯುತ ಶಾಲೆಯಲ್ಲಿ ಮುಖ್ಯೋಪಾಧ್ಯಾಯರಾಗಿ ನೇಮಕಗೊಂಡು ಕಳೆದ 34 ವರ್ಷಗಳಿಂದ ಅವಿರತವಾಗಿ ವಿಕಲಚೇತನ ಮಕ್ಕಳಿಗೆ ಉತ್ತಮ ಶಿಕ್ಷಣ ನೀಡುವಲ್ಲಿ ಸದಾ ಶ್ರಮಿಸಿದ್ದಾರೆ. ಮಕ್ಕಳ ಶ್ರೇಯೋಭಿವೃದ್ಧಿಗಾಗಿ ತಮ್ಮ ಜೀವನವನ್ನೇ ಸವೆಸಿದ್ದಾರೆ. ಇಂತಹ ಶ್ರೇಷ್ಠ ಶ್ರಮಜೀವಿ, ಪ್ರಾಮಾಣಿಕ ಶಿಕ್ಷಕ ಫೆ.29ರಂದು ಅವರ ಅಮೋಘವಾದ ಸೇವೆಯಿಂದ ನಿವೃತ್ತರಾಗುತ್ತಿದ್ದಾರೆ.



ವಿದ್ಯಾರ್ಥಿಗಳ ನೆಚ್ಚಿನ ಶಿಕ್ಷಕರಾದ ದತ್ತಾತ್ರೇಯ ಗೋವಿಂದ ಕುಲಕರ್ಣಿಯವರು ಮೂಲತಃ ಗದಗ ಜಿಲ್ಲೆ ರೋಣ ತಾಲೂಕಿನ ಜಕ್ಕಲಿ ಗ್ರಾಮದವರು. 1964ರ ಫೆಬ್ರವರಿ 8ರಂದು ತಾಯಿ ಲಕ್ಷ್ಮೀಬಾಯಿಯವರ ತವರಾದ ಹಾವೇರಿಯಲ್ಲಿ ಜನಿಸಿದರು. ತಂದೆ ಗೋವಿಂದರಾವ್ ಶಿಕ್ಷಕ ವೃತ್ತಿಯಲ್ಲಿದ್ದುದರಿಂದ ಒಳ್ಳೆಯ ಶಿಕ್ಷಣದೊಂದಿಗೆ ಸಂಸ್ಕಾರ ದೊರೆಯಿತು. ಬಾಲ್ಯದಿಂದಲೇ ಉತ್ತಮವಾದ ಗುಣ, ಸ್ವಭಾವ-ನಡತೆಗಳನ್ನು ರೂಢಿಸಿಕೊಂಡು ಶಿಸ್ತುಬದ್ಧವಾದ ಜೀವನಕ್ಕೆ ಅಡಿಪಾಯ ಹಾಕಿಕೊಂಡರು. ಯಾವ ಸಂಸ್ಥೆಯಲ್ಲಿ ಕಾಲೇಜು ಶಿಕ್ಷಣ ಪಡೆದು ಪ್ರತಿಭಾವಂತ ವಿದ್ಯಾರ್ಥಿ ಎಂದು ಗುರುತಿಸಿಕೊಂಡಿದ್ದರೋ ಅದೇ ಸಂಸ್ಥೆಯಲ್ಲಿ ಸೇವೆ ಸಲ್ಲಿಸಿರುವುದು ಮತ್ತೊಂದು ವಿಶೇಷ.

ಹಾಲಕೆರೆ ಶ್ರೀ ಅನ್ನದಾನೇಶ್ವರ ಮಠದ ಲಿಂ. ಪೂಜ್ಯ ಶ್ರೀ ಅಭಿನವ ಅನ್ನದಾನ ಮಹಾಸ್ವಾಮಿಗಳ ಕೃಪಾಶೀರ್ವಾದ ಹಾಗೂ ಅಪ್ಪಣೆ ಮೇರೆಗೆ ಸೇವೆಯನ್ನು ಪ್ರಾರಂಭಿಸಿದ ಇವರು ಶಾಲೆಯ ಕಿವುಡ-ಮೂಗ ವಿದ್ಯಾರ್ಥಿಗಳನ್ನು ತಮ್ಮ ಸ್ವಂತ ಮಕ್ಕಳೆಂದು ಭಾವಿಸಿ, ತಮ್ಮದೇ ಆದ ವಿಶಿಷ್ಟ ಪ್ರೀತಿಯ ಸಂಜ್ಞಾ ಭಾಷೆಯಲ್ಲಿ ಉತ್ತಮ ಶಿಕ್ಷಣ ನೀಡಿ, ಮಾತಿನ ತರಬೇತಿ ನೀಡಿದ್ದಾರೆ. ವಿದ್ಯಾರ್ಥಿಗಳಿಗಾಗಿ ಹಲವಾರು ಬಗೆಯ ಪಾಠೋಪಕರಣ ತಯಾರಿಸಿ, ಪಾಠ ಬೋಧನೆ ಮಾಡುತ್ತಾರೆ. ಮಕ್ಕಳಿಂದಲೂ ಪಾಠೋಪಕರಣ, ಮಣ್ಣಿನಿಂದ ಮೂರ್ತಿ, ರಟ್ಟಿನಿಂದ ವಿಶೇಷ ಬಗೆಯ ಮಾದರಿಗಳನ್ನು ಮಾಡಿಸಿ, ಎಲ್ಲರಿಂದಲೂ ಸೈ ಎನಿಸಿಕೊಂಡಿದ್ದಾರೆ. ವಿದ್ಯಾರ್ಥಿಗಳಿಗೆ ವಿಶೇಷವಾಗಿ ಒಳ್ಳೆಯ ಗುಣ, ಸಂಸ್ಕಾರ, ಸಂಸ್ಕೃತಿಯನ್ನು ನೀಡಿ, ಉತ್ತಮ ನಾಗರಿಕರನ್ನಾಗಿ ತಯಾರುಗೊಳಿಸುತ್ತಿದ್ದಾರೆ. ಕಿರು ನಾಟಕಗಳನ್ನು ಸ್ವತಃ ತಾವೇ ಬರೆದು, ನಿರ್ದೇಶನ ನೀಡಿ, ನಾಟಕ, ರೂಪಕಗಳನ್ನು ಮಾಡಿಸಿ, ಎಲ್ಲರೂ ಬೆರಗಾಗುವಂತೆ ಮಾಡಿದ್ದಾರೆ.

ಶಾಲೆಯ ಎಲ್ಲ ಶಿಕ್ಷಕರೊಂದಿಗೆ ಸೇರಿ, ಸನ್ನೆ ಭಾಷೆಯ ಮೂಲಕ ನಾಟಕ ಮಾಡಿಸಿ, ಎಲ್ಲರ ಹೊಗಳಿಕೆಗೆ ಪಾತ್ರರಾಗಿದ್ದಾರೆ. ವಿದ್ಯಾರ್ಥಿಗಳಲ್ಲಿ ಕ್ರೀಡೆಯ ಬಗ್ಗೆಯೂ ಹೆಚ್ಚಿನ ಪ್ರೋತ್ಸಾಹ ನೀಡಿ, ಅದರಲ್ಲಿ ಆಸಕ್ತಿ ಬೆಳೆಸಿ, ಒಳ್ಳೆಯ ತರಬೇತಿ ನೀಡಿ, ವಿವಿಧ ಕ್ರೀಡೆಯಲ್ಲಿ ಸ್ಪರ್ಧಿಸಿ ರಾಜ್ಯ, ರಾಷ್ಟ್ರಮಟ್ಟದಲ್ಲಿ ಪ್ರಶಸ್ತಿ ಪಡೆದಿದ್ದಾರೆ. ಇದೇ ರೀತಿ ಮಕ್ಕಳಿಂದ ಕಿರು ನಾಟಕ, ಕೋಲಾಟ, ಜಾನಪದ ನೃತ್ಯ ಮುಂತಾದ ಕಾರ್ಯಕ್ರಮಗಳಲ್ಲಿ ಸ್ಪರ್ಧಿಸಿ ಪ್ರಶಸ್ತಿ ಗಳಿಸುವಂತೆ ಮಾಡಿದ್ದಾರೆ. ಅಲ್ಲದೆ ಮಕ್ಕಳಿಗೆ ಕಸೂತಿ, ಚಿತ್ರಕಲೆ, ಟೈಲರಿಂಗ್, ತೋಟಗಾರಿಕೆಗೆ ಸಂಬಂಧಿಸಿದ ಶಿಕ್ಷಕರಿಂದ ತರಬೇತಿ ಕೊಡಿಸಿ ಮಕ್ಕಳಿಗೆ ಸ್ವಾವಲಂಬಿ ಜೀವನಕ್ಕೆ ದಾರಿ ಮಾಡಿಕೊಟ್ಟಿದ್ದಾರೆ.

ಮಕ್ಕಳಿಗೆ ಸರ್ಕಾರದಿಂದ ಹಾಗೂ ಸಂಘ-ಸಂಸ್ಥೆಗಳಿಂದ ವೈಯಕ್ತಿಕ ಶ್ರವಣ ಸಾಧನಗಳು ದೊರೆಯುವಂತೆ ಮಾಡಿದ್ದಾರೆ. ವಿದ್ಯಾರ್ಥಿಗಳಿಗೆ ದೈಹಿಕ ಶಿಕ್ಷಕರಿಂದ ಯೋಗ ತರಬೇತಿ ಹಾಗೂ ಮಲ್ಲಕಂಬ ತರಬೇತಿ ನೀಡಿ, ಅವುಗಳ ಪ್ರದರ್ಶನದ ಮೂಲಕ ಜನರ ಪ್ರೀತಿಗೆ ಪಾತ್ರರಾಗಿದ್ದಾರೆ. ಮಕ್ಕಳ ಹಾಗೂ ಶಾಲೆಯ ಸ್ವಚ್ಛತೆಗೆ ಸಾಕಷ್ಟು ಶ್ರಮಿಸಿದ್ದಾರೆ. ವೇಳೆಗೆ ಮಹತ್ವ ಕೊಟ್ಟು ಎಲ್ಲರೂ ಸರಿಯಾಗಿ ಶಾಲಾ ಸೇವೆಯಲ್ಲಿ ತೊಡಗುವಂತೆ ಪ್ರೇರೇಪಿಸಿದ್ದಾರೆ. ಶಾಲೆಯ ಕಾರ್ಯಾಲಯ, ತರಗತಿ, ಆವರಣಗಳನ್ನು ಅಂದವಾಗಿಟ್ಟಿದ್ದಾರೆ.

ಡಿ. ಜಿ. ಕುಲಕರ್ಣಿ ಶಿಕ್ಷಕರ ಸಾಧನೆಗೆ 5 ಪ್ರಶಸ್ತಿಗಳು ದೊರೆತಿದ್ದು, ಅದರಲ್ಲಿ ಸರ್ಕಾರದಿಂದ ರಾಜ್ಯ ಉತ್ತಮ ಶಿಕ್ಷಕ ಪ್ರಶಸ್ತಿ, 'ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ' ಬಂದಿವೆ. ಈ ಸಾಧನೆಗೆ ಸಂಸ್ಥೆಯ ಈಗಿನ ಅಧ್ಯಕ್ಷರಾದ ಪೂಜ್ಯ ಶ್ರೀ ಮುಪ್ಪಿನ ಬಸವಲಿಂಗ ಮಹಾಸ್ವಾಮಿಗಳ ಆಶೀರ್ವಾದವೇ ಕಾರಣ ಎಂದು ಹೆಮ್ಮೆಯಿಂದ ಹೇಳುತ್ತಾರೆ. ಇವರ ವಿಶ್ರಾಂತ ಜೀವನ ಸುಖಕರವಾಗಿರಲಿ.



**- ಈಶ್ವರ ಕುರಿ. (ಜಕ್ಕಲಿ)**

# ಡೋಹರ ಕಕ್ಕಯ್ಯ ಮನುಕುಲಕ್ಕೆ ದಾರಿದೀಪ

**■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ**

ಡೋಹರ ಕಕ್ಕಯ್ಯನವರ ಆದರ್ಶಗಳನ್ವಯ ಮಕ್ಕಳಿಗೆ ಉತ್ತಮವಾದ ಸಂಸ್ಕಾರಯುತ ಶಿಕ್ಷಣ ನೀಡಬೇಕು ಎಂದು ಡೋಹರ ಕಕ್ಕಯ್ಯ ಕುರಿತು ಪಿಎಚ್‌ಡಿ ಪ್ರಬಂಧ ಮಂಡಿಸಿದ ಡಾ.ಮಾರ್ಕಂಡಯ್ಯ ದೊಡ್ಡಮನಿ ಹೇಳಿದರು.




ಅವರು ಪಟ್ಟಣದ ಡೋಹರ ಕಕ್ಕಯ್ಯ ಸಮಾಜದಿಂದ ಹಮ್ಮಿಕೊಳ್ಳಲಾಗಿದ್ದ ಶ್ರೀ ಏಳು ಮಕ್ಕಳ ತಾಯಿ ಜಾತ್ರಾ ಮಹೋತ್ಸವ, ಶಿವಶರಣ ಢೋಹರ ಕಕ್ಕಯ್ಯ ಜಯಂತಿ ಕಾರ್ಯಕ್ರಮದಲ್ಲಿ ಸನ್ಮಾನ ಸ್ವೀಕರಿಸಿ ಮಾತನಾಡಿದರು.

ಮನುಕುಲಕ್ಕೆ ದಾರಿದೀಪವಾದ ಕಕ್ಕಯ್ಯನರ ಆದರ್ಶ ಚಿಂತನೆ, ಮೌಲ್ಯಗಳನ್ನು ವಿದ್ಯಾರ್ಥಿ ಮತ್ತು ಯುವಕರಲ್ಲಿ ಬಿತ್ತಬೇಕಿದೆ. ಬಸವಣ್ಣನವರ ಅನುಯಾಯಿಗಳಾದ ಮಾದರ ಚನ್ನಯ್ಯ, ಡೋಹರ ಕಕ್ಕಯ್ಯನವರ ಜೀವನ, ತತ್ವ-ಚಿಂತನೆಗಳು ಎಲ್ಲರಿಗೂ ದಾರಿದೀಪವಾಗಿವೆ. ದೇಹಕ್ಕೆ ವಯಸ್ಸಾಗುತ್ತದೆ ಆದರೆ ಮನಸ್ಸಿಗಲ್ಲ ಎಂಬ ಸತ್ಯ ಅರಿತು ಸಮಾಜಕ್ಕೆ ನಮ್ಮದೇ ಆದ ಶ್ರೇಷ್ಠ ಕೊಡುಗೆ ನೀಡುವ ಮನೋಭಾವ ಎಲ್ಲರದ್ದಾಗಬೇಕು ಎಂದರು.

ಸಮಾಜದ ಹಿರಿಯರಾದ ಪೂರ್ಣಾಜಿ ಖರಾಟೆ ಅಧ್ಯಕ್ಷತೆ ವಹಿಸಿ ಮಾತನಾಡಿ, ಕಾಯಕ ಶರಣರ ವಚನಗಳ ತತ್ವ-ಸಿದ್ಧಾಂತಗಳು ಯಾವುದೇ ಒಂದು ಜಾತಿ-ಜನಾಂಗಕ್ಕೆ ಸೀಮಿತವಾಗಿರದೇ ಎಲ್ಲರಿಗೂ ದಾರಿದೀಪವಾಗಿವೆ. ಸಮಾಜ ಬಾಂಧವರು ಒಗ್ಗಟ್ಟಿನಿಂದ ಬಾಳಿದಾಗ ಮಾತ್ರ ಬದುಕಿಕೊಂದು ದೃಢತೆ ಉಳಿಯುತ್ತದೆ ಎಂದರು.

ಸೋಮೇಶ್ವರ ದೇವಸ್ಥಾನ ಭಕ್ತರ ಕಮಿಟಿ ಅಧ್ಯಕ್ಷ ಚಂಬಣ್ಣ ಬಾಳಿಕಾಯಿ, ಶಿಗ್ಲಿಯ ಸೋಮಣ್ಣ ಡಾಣಗಲ್, ಸಾಹಿತಿಗಳಾದ ಸಿ.ಜಿ. ಹಿರೇಮಠ. ಮಹಾದೇವಪ್ಪ ಕೊತ್ತಲ ಮಾತನಾಡಿದರು. ಈ ವೇಳೆ ಸಾವಿತ್ರಿಬಾಯಿ ಫುಲೆ ಪ್ರಶಸ್ತಿ ಪುರಸ್ಕೃತ ಶಿಕ್ಷಕಿ ಗೀತಾ ಗಣಪತಿ ಖರಾಟೆ, ಪುರಸಭೆ ಸದಸ್ಯೆ ಪೂಜಾ ಪ್ರಮೋದ ಖರಾಟೆ ಅವರನ್ನು ಸನ್ಮಾನಿಸಲಾಯಿತು.

ಸುರೇಶ ರಾಚನಾಯ್ಕರ, ಓಂಕಾರೆಪ್ಪ ಗಜಾಕೋಶ, ಮಲ್ಲೇಶಪ್ಪ ಗಜಾಕೋಶ, ನಾಗೇಂದ್ರಪ್ಪ ಖರಾಟೆ, ಫಕ್ಕೀರಪ್ಪ ನಾರಾಯಣಕರ ಚಂದ್ರು ಗಜಾಕೋಶ, ಮೋಹನ ಗಜಾಕೋಶ, ವಿಜಯಲಕ್ಷ್ಮೀ ಖರಾಟೆ, ರಾಜೇಶ ಖರಾಟೆ ಸೇರಿ ಸಮಾಜ ಬಾಂಧವರು, ಯುವಕರು ಇದ್ದರು. ಸತೀಶ ನಾರಾಯಣಕರ ನಿರೂಪಿಸಿದರು.

## ನೀರು ಪೂರೈಕೆಗೆ ವಿಶೇಷ ಅನುದಾನ

▸▸ಮೊದಲನೇ ಪುಟದಿಂದ

ಈ ವಿಷಯವಾಗಿ ಪ್ರತಿಪಕ್ಷದ ಸದಸ್ಯರು ಮತ್ತು ಅಧ್ಯಕ್ಷರ ನಡುವೆ ಗಂಭೀರ ಚರ್ಚೆ ನಡೆದು, ಅಂತಿಮವಾಗಿ ವಾರ್ಡ್‌ವಾರು 5 ಲಕ್ಷ ರೂ. ಮೀಸಲಿಡುವಂತೆ ಉಷಾ ದಾಸರ ಅವರು ಪೌರಾಯುಕ್ತರಿಗೆ ಸೂಚಿಸಿದರು.

ಅವಳಿ ನಗರದ ನಿರಂತರ ಕುಡಿಯುವ ನೀರಿನ ಯೋಜನೆ ಸುಧಾರಣೆಗೆ ಅಮೃತ ನಗರೋತ್ಥಾನ 4ನೇ ಹಂತವಾಗಿ 40 ಕೋಟಿ ರೂ. ಬಿಡುಗಡೆಯಾಗಿದ್ದು, ತಿಂಗಳಲ್ಲಿಯೇ ಕಾಮಗಾರಿ ಆರಂಭಿಸಲಾಗುವುದು. ಜೊತೆಗೆ ನಗರಸಭೆ ಅನುದಾನದಲ್ಲಿ 4.74 ಕೋಟಿ ರೂ., ಯಂತ್ರೋಪಕರಣಗಳ ಖರೀದಿಗಾಗಿ 14.65 ಕೋಟಿ ರೂ. ವೆಚ್ಚ ಮಾಡಲು ನಿರ್ಧರಿಸಲಾಗಿದೆ ಎಂದು ಉಷಾ ದಾಸರ ಘೋಷಿಸಿದರು.

ನಗರಸಭೆ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಕಾರ್ಯನಿರತ ಪತ್ರಕರ್ತರ ಮಕ್ಕಳ ಶ್ರೇಯೋಭಿವೃದ್ಧಿಗೆ 5 ಲಕ್ಷ ರೂ. ವಂತಿಗೆ ನೀಡಲಾಗುವುದು ಎಂದು ಉಷಾ ದಾಸರ ಘೋಷಣೆ ಮಾಡಿದರು.

ಆಯ-ವ್ಯಯ ಮಂಡನಾ ಸಭೆಯಲ್ಲಿ ನಗರಸಭೆ ಉಪಾಧ್ಯಕ್ಷೆ ಸುನಂದಾ ಬಾಕಳೆ, ಪೌರಾಯುಕ್ತ ಮಾರುತಿ ಬ್ಯಾಕೋಡ, ನಗರಸಭೆ ಸ್ಥಾಯಿ ಸಮಿತಿ ಅಧ್ಯಕ್ಷ ಅನಿಲ ಅಬ್ಬಿಗೇರಿ, ನಗರಸಭೆ ಸದಸ್ಯರಾದ ರಾಘವೇಂದ್ರ ಯಳವತ್ತಿ, ಕೃಷ್ಣಾ ಪರಾಪುರ ಸಹಿತ ಚುನಾಯಿತ ಪ್ರತಿನಿಧಿಗಳು, ಅಧಿಕಾರಿಗಳು ಉಪಸ್ಥಿತರಿದ್ದರು.

ನಗರಸಭೆ ಬಜೆಟ್ ಮಂಡನೆ ಸಭೆಗೆ ಮಾಧ್ಯಮ ಪ್ರತಿನಿಧಿಗಳಿಗೆ ಅಧಿಕೃತ ಆಹ್ವಾನ ನೀಡದಿರುವ ಅಧಿಕಾರಿಗಳು ಮತ್ತು ಜನಪ್ರತಿನಿಧಿಗಳ ನಡೆಗೆ ಮಾಧ್ಯಮ ಪ್ರತಿನಿಧಿಗಳು ಅಸಮಾಧಾನ ವ್ಯಕ್ತಪಡಿಸಿದರು. ಬಜೆಟ್ ಸಭೆಯ ಕುರಿತು ಸಾರ್ವಜನಿಕರಿಗೂ ಮಾಹಿತಿ ನೀಡದೆ ತರಾತುರಿಯಲ್ಲಿ ಆಯ-ವ್ಯಯ ಮಂಡಿಸಿರುವುದು ಅನುಮಾನಕ್ಕೂ ಕಾರಣವಾಯಿತು.

## ನಾಳೆ ವಿಶೇಷ ಸಾಮಾನ್ಯ ಸಭೆ

■ವಿಜಯಸಾಕ್ಷಿ ಸುದ್ದಿ, ಗದಗ

ಗದಗ ಬೆಟಗೇರಿ ನಗರಸಭೆಯ ಸಭಾಭವನದಲ್ಲಿ ಮಾರ್ಚ್ 1 ರಂದು ಬೆಳಿಗ್ಗೆ 11 ಗಂಟೆಗೆ ವಿಶೇಷ ಸಾಮಾನ್ಯ ಸಭೆ ಹಮ್ಮಿಕೊಳ್ಳಲಾಗಿದೆ ಎಂದು ನಗರಸಭೆ ಪೌರಾಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### 'ಥರ್ಡ್ ಐ' ಅಳವಡಿಕೆಗೂ ಮುನ್ನವೇ ವ್ಯಕ್ತವಾದ ವಿರೋಧ । ಸಂಘಟನೆಗಳಿಂದ ಮನವಿ

# ಪಟ್ಟಣದಲ್ಲಿ 'ಥರ್ಡ್ ಐ' ಬೇಡ

■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ


ಪೊಲೀಸ್ ಇಲಾಖೆಯ ವತಿಯಿಂದ ಟ್ರಾಫಿಕ್ ನಿಯಮ ಪಾಲನೆಗಾಗಿ ಗದಗದಲ್ಲಿ ಅಳವಡಿಸಿರುವ 'ಥರ್ಡ್ ಐ' ಸಿಸಿ ಕ್ಯಾಮರಾ ಕಣ್ಗಾವಲ್ಮಾದರಿಯ ವ್ಯವಸ್ಥೆಯನ್ನು ಪಟ್ಟಣದಲ್ಲಿ ಮಾರ್ಚ್ 1ರಿಂದ ಜಾರಿಗೊಳಿಸುವ ಬಗ್ಗೆ ಪೊಲೀಸ್ ಇಲಾಖೆ ಸಾಮಾಜಿಕ ಜಾಲತಾಣಗಳ ಮೂಲಕ ಸಾರ್ವಜನಿಕ ಪ್ರಕಟಣೆ ನೀಡಿದೆ. ಇದರ ಬೆನ್ನಲ್ಲೇ ಸಾರ್ವಜನಿಕರು ಮತ್ತು ಹಲವು ಸಂಘಟನೆಗಳು ಅಪಸ್ವರ ವ್ಯಕ್ತಪಡಿಸಿದ್ದು, ಈ ವ್ಯವಸ್ಥೆಯನ್ನು ಜಾರಿಗೆ ತರದಂತೆ ಸಾರ್ವಜನಿಕ ವಲಯದಲ್ಲಿ ವಿರೋಧ ವ್ಯಕ್ತವಾಗುತ್ತಿದೆ.

ಇದಕ್ಕೆ ಪೂರಕ ಎಂಬಂತೆ ಪಟ್ಟಣದಲ್ಲಿ ಥರ್ಡ್ ಐ ಅಳವಡಿಕೆಯನ್ನು ಕೈಬಿಡುವಂತೆ ಆಗ್ರಹಿಸಿ ಕರ್ನಾಟಕ ರಕ್ಷಣಾ ವೇದಿಕೆ (ಪ್ರವೀಣ ಶೆಟ್ಟಿ ಬಣ)ದ ಕಾರ್ಯಕರ್ತರು ಮತ್ತು ಸಾರ್ವಜನಿಕರು ಶಾಸಕ ಡಾ.ಚಂದ್ರು ಲಮಾಣಿಯವರಿಗೆ ಹಾಗೂ ಸಿಪಿಐ ನಾಗರಾಜ ಮಾಡಳ್ಳಿ ಅವರಿಗೆ ಮನವಿ ಸಲ್ಲಿಸಿದರು.

ಈ ಕುರಿತು ಮಾತನಾಡಿದ ವೇದಿಕೆ ಅಧ್ಯಕ್ಷ ಮಹೇಶ ಕಲಘಟಗಿ, ಕಡ್ಡಾಯವಾಗಿ ಹೆಲ್ಮೆಟ್ ಧರಿಸುವದು, ಸೀಟ್‌ಬೆಲ್ಟ್, ರಾಂಗ್ ಪಾರ್ಕಿಂಗ್ ಸೇರಿ ಕೆಲವು ನಿಯಮಗಳು ಕ್ಯಾಮರಾ ಮೂಲಕ ಜಾರಿಗೊಳಿಸುವುದರಿಂದ ರೈತರು, ವಿದ್ಯಾರ್ಥಿಗಳು, ಬೀದಿ ವ್ಯಾಪಾರಸ್ಥರು ಸೇರಿ ಜನಸಮಾನ್ಯರಿಗೆ ಅನಗತ್ಯ ಹೊರೆ ಮತ್ತು ತೊಂದರೆಯಾಗುತ್ತದೆ. ಲಕ್ಷ್ಮೇಶ್ವರ ಬಹುತೇಕ ರೈತಾಪಿ ಜನರಿಂದ ಕೂಡಿದೆ ಮತ್ತು ಗ್ರಾಮೀಣ ಪ್ರದೇಶದ ಜನರು ನಿತ್ಯ ವ್ಯಾಪಾರ-ವಹಿವಾಟಿಗಾಗಿ ಅಡ್ಡಾಡುವ ಪ್ರದೇಶಗಳಲ್ಲಿ ಸಿಸಿ ಕ್ಯಾಮರಾ ಅಳವಡಿಕೆಯಿಂದ ರೈತರು ಮತ್ತು ಗ್ರಾಮೀಣ ಪ್ರದೇಶದ ಜನರಿಗೆ ತೊಂದರೆಯಾಗಲಿದೆ.

ಸಾವಿರಾರು ಜನರು ಸಂಚರಿಸುವ ಪ್ರಮುಖ ರಸ್ತೆಗಳಲ್ಲಿಯೇ ಈ ಥರ್ಡ್ ಐ ಪಿಟಿಝೆಡ್ ಕ್ಯಾಮರಾಗಳನ್ನು ಅಳವಡಿಸಲಾಗಿದೆ. ಸಂಚಾರಿ ನಿಯಮಗಳನ್ನು ಅಳವಡಿಸುವದಕ್ಕೆ ವೇದಿಕೆಯವರು ಸ್ವಾಗತಿಸುತ್ತೇವೆ ಮತ್ತು ಗೌರವಿಸುತ್ತೇವೆ. ಆದರೆ ಪಟ್ಟಣದಲ್ಲಿ ಉತ್ತಮ ರಸ್ತೆಗಳಿಲ್ಲ, ಪಾರ್ಕಿಂಗ್ ಸ್ಥಳವಿಲ್ಲ, ಸಂಚಾರಿ ಫಲಕ, ಸಂಚಾರಿ ದೀಪಗಳಿಲ್ಲ. ಇವುಗಳನ್ನು ಮಾಡಿದಾಗ ಮಾತ್ರ ಈ ವ್ಯವಸ್ಥೆಗೆ ಜನರು ಹೊಂದಿಕೊಳ್ಳಬಹುದಾಗಿದೆ. ಅಲ್ಲದೇ ಇದೀಗ ಬೇಸಿಗೆ ಕಾಲವಾಗಿದ್ದರಿಂದ ಹೆಲ್ಮೆಟ್ ಉಪಯೋಗಿಸುವದು ಸಹ ಕಷ್ಟವಾಗುತ್ತದೆ. ಸಂಚಾರಿ ನಿಯಮಗಳನ್ನು ಪಟ್ಟಣದಲ್ಲಿ 1-2 ಕಿ.ಮೀ ಹೊರತುಪಡಿಸಿ ಅಳವಡಿಸಿದರೆ ಸೂಕ್ತ. ಈ ಕುರಿತು ಸೂಕ್ತ ಕ್ರಮ ಕೈಗೊಳ್ಳುವಂತೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಿಗೆ ನಿರ್ದೇಶನ ನೀಡುವಂತೆ ಶಾಸಕರಿಗೆ ಮನವಿ ಮಾಡುವದಾಗಿ ಹೇಳಿದರು. ಶಾಸಕ ಡಾ.ಚಂದ್ರು ಲಮಾಣಿ, ಮತ್ತು ಸಿಪಿಐ ನಾಗರಾಜ ಮಾಡಳ್ಳಿ ಮನವಿ ಸ್ವೀಕರಿಸಿದರು.

ಈ ಸಂದರ್ಭದಲ್ಲಿ ತಿರಕಪ್ಪ ಯಲಗಚ್ಚ, ಮುತ್ತು ಕುಂದಗೋಳ, ಚಂದ್ರು ಪಾಣಿಗಟ್ಟಿ, ಈಶ್ವರಗೌಡ ಪಾಟೀಲ, ಶ್ರೇಯಾಂಕ್ ಹಿರೇಮಠ, ಪ್ರಸನ್ನ ಅರಳಿ, ಪ್ರವೀಣ ದಶಮನಿ, ಸತೀಶ ಮೇದೂರ, ಪ್ರಜ್ವಲ್ ಗಾಂಜಿ, ಬಸನಗೌಡ ಮನ್ನಂಗಿ, ಯು.ಪದ್ಮನಾಭ ಶೆಟ್ಟಿ, ಸೋಮಣ್ಣ ಬೆಟಗೇರಿ, ಸೇರಿದಂತೆ ಅನೇಕರಿದ್ದರು.



> ಕಾನೂನು ಪಾಲನೆ ಎಲ್ಲರ ಕರ್ತವ್ಯ. ಆದರೆ ಹೆಲ್ಮೆಟ್ ಕಡ್ಡಾಯದಿಂದ ರೈತರಿಗೆ, ಸಾರ್ವಜನಿಕರಿಗೆ ಪಟ್ಟಣ ಪ್ರದೇಶದಲ್ಲಿ ಸಂಚರಿಸುವವರಿಗೆ ತೊಂದರೆಯಾಗುತ್ತದೆ ಎನ್ನುವ ನಿಟ್ಟಿನಲ್ಲಿ ಸಾರ್ವಜನಿಕರು, ಸಂಘಟನೆಯವರು ಊರಿನ ಹೊರಗಡೆ ಈ ನಿಯಮಗಳನ್ನು ಅಳವಡಿಸುವಂತೆ ಮತ್ತು ಅಲ್ಲಿ ಸಿಸಿ ಕ್ಯಾಮರಾ ಅಳವಡಿಸುವಂತೆ ಮನವಿ ಮಾಡಿದ್ದಾರೆ. ಮೊದಲೇ ಬರಗಾಲದ ಸಂಕಷ್ಟದಲ್ಲಿರುವ ಜನರಿಗೆ ಈ ವ್ಯವಸ್ಥೆ ಮತ್ತಷ್ಟು ಸಂಕಷ್ಟಕ್ಕೀಡುಮಾಡಲಿದೆ. ಈ ಕುರಿತಂತೆ ಎಸ್‌ಪಿಯವರೊಂದಿಗೆ ಚರ್ಚಿಸಿ ಸೂಕ್ತ ಕ್ರಮ ಕೈಗೊಳ್ಳುವಂತೆ ತಿಳಿಸಲಾಗುವದು.
>
> **- ಡಾ.ಚಂದ್ರು ಲಮಾಣಿ.**
> ಶಾಸಕರು, ಶಿರಹಟ್ಟಿ ಮತಕ್ಷೇತ್ರ.

## ವಿಜ್ಞಾನದ ಬಳಕೆ ಆರೋಗ್ಯಕರವಾಗಿರಲಿ



■ವಿಜಯಸಾಕ್ಷಿ ಸುದ್ದಿ, ಹರಪನಹಳ್ಳಿ

ರಾಷ್ಟ್ರೀಯ ವಿಜ್ಞಾನ ದಿನಾಚರಣೆ ಭಾರತದ ಶ್ರೀಮಂತ ಪರಂಪರೆಯನ್ನು ನೆನಪಿಸುವ ದಿನವಾಗಿದ್ದು, ಸರ್ ಸಿ.ವಿ. ರಾಮನ್‌ರವರು ಏಷ್ಯಾ ಖಂಡದಲ್ಲಿ ವಿಜ್ಞಾನದ ವಿಷಯದಲ್ಲಿ ನೋಬೆಲ್ ಪಾರಿತೋಷಕ ಪಡೆದ ಮೊದಲ ವಿಜ್ಞಾನಿಯಾಗಿದ್ದಾರೆ. ನಮ್ಮ ದೇಶವು ವೈಜ್ಞಾನಿಕ ಕ್ಷೇತ್ರದಲ್ಲಿ ಸಾಕಷ್ಟು ಎತ್ತರಕ್ಕೆ ಬೆಳೆದಿದ್ದು, ಜಗತ್ತಿನ ಪ್ರಮುಖ ರಾಷ್ಟ್ರಗಳ ಪಟ್ಟಿಗೆ ಸೇರ್ಪಡೆಯಾಗುವ ಮೂಲಕ ವೈಜ್ಞಾನಿಕ ಸಂಶೋಧನೆಯಲ್ಲಿ ನಾವು ಬೆಳವಣಿಗೆ ಕಂಡಿದ್ದೇವೆ ಎಂದು ಮುಖ್ಯ ಶಿಕ್ಷಕ ರುದ್ರೇಶ್ ಬಡಿಗೇರ್ ಹೇಳಿದರು.

ತಾಲೂಕಿನ ತೌಡೂರೂ ಗ್ರಾಮದ ಎ.ಎಂ. ಕಾಡಮ್ಮ ವೀರಯ್ಯ ಸರ್ಕಾರಿ ಪ್ರೌಢಶಾಲೆಯಲ್ಲಿ ರಾಷ್ಟ್ರೀಯ ವಿಜ್ಞಾನ ದಿನಾಚರಣೆ ಉದ್ಘಾಟಿಸಿ ಅವರು ಮಾತನಾಡಿದರು.

ವಿಜ್ಞಾನ ಶಿಕ್ಷಕಿ ರೇಷ್ಮಾ ಎಂ ಮಾತನಾಡಿ, ಕ್ಷಿಪ್ರಗತಿಯ ಆವಿಷ್ಕಾರದಿಂದ ನಮ್ಮನ್ನು ನೋಡುವ ದೃಷ್ಟಿಕೋನಗಳು ಬದಲಾಗಿವೆ. ಮಕ್ಕಳು ಪ್ರತಿನಿತ್ಯ ಓದಿನ ಕಡೆಗೆ ಗಮನ ಹರಿಸಬೇಕು. ಒಳ್ಳೆಯ ವಿಚಾರಗಳನ್ನು ಅಳವಡಿಸಿಕೊಂಡು ದೇಶಕ್ಕೆ ಮಾದರಿ ಕೊಡುಗೆಯನ್ನು ನೀಡುವ ಆಲೋಚನೆಗಳನ್ನು ಮೈಗೂಡಿಸಿಕೊಳ್ಳಬೇಕು ಎಂದರು.

ಈ ಸಂದರ್ಭದಲ್ಲಿ ಸದಾನಂದ ನಾಯಕ್, ದೇವರಾಜ್, ಜಗದೀಶ್ ಜಿ.ಎಂ ಸೇರಿದಂತೆ ಶಿಕ್ಷಕರಿದ್ದರು.

## ಟಿಕೆಟ್ ತಪ್ಪಿಸುವ ಹುನ್ನಾರ

■ವಿಜಯಸಾಕ್ಷಿ ಸುದ್ದಿ, ಹರಪನಹಳ್ಳಿ

ನಾನು ಸಂಸದನಾಗಿ ಆಯ್ಕೆಯಾದಲ್ಲಿ ಹರಪನಹಳ್ಳಿ ಕ್ಷೇತ್ರದಲ್ಲಿ ಪ್ರಮುಖವಾಗಿ ಇರುವ ಜ್ವಲಂತ ಸಮಸ್ಯೆಗಳನ್ನು ಪರಿಹರಿಸುವ ಗುರಿ ಹೊಂದಿದ್ದು, ಇಂಜಿನಿಯರಿಂಗ್ ಕಾಲೇಜು ಸೇರಿದಂತೆ ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿಗಾಗಿ ಈ ಭಾಗದಲ್ಲಿ ಉತ್ತಮ ಗುಣಮಟ್ಟದ ತರಬೇತಿ ಕೇಂದ್ರ ತೆರೆಯುವ, ಬಡ ಮಕ್ಕಳಿಗೆ ಉಚಿತ ಶಿಕ್ಷಣ ನೀಡುವ ಗುರಿ ಹೊಂದಿದ್ದೇನೆ ಎಂದು ಲೋಕಸಭಾ ಚುನಾವಣಾ ಪ್ರಬಲ ಆಕಾಂಕ್ಷಿ ಜಿ.ಬಿ. ವಿನಯ್‌ಕುಮಾರ್ ತಿಳಿಸಿದರು.

ಪಟ್ಟಣದ ಪ್ರವಾಸಿ ಮಂದಿರ ಸಭಾಂಗಣದಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿ, ಕೆಲ ಪಟ್ಟಾಭದ್ರ ಹಿತಾಸಕ್ತಿಗಳು ಅಹಿಂದ ವರ್ಗದವರಿಗೆ ಟಿಕೆಟ್ ತಪ್ಪಿಸುವ ಹುನ್ನಾರ ನಡೆಸುತ್ತಿದ್ದಾರೆ. ಲೋಕಸಭಾ ಕ್ಷೇತ್ರದ ಎಲ್ಲಾ ತಾಲೂಕುಗಳ ಹಳ್ಳಿಗಳಿಗೆ ಭೇಟಿ ನೀಡಿ ತಳಮಟ್ಟದಿಂದ ಪಕ್ಷ ಸಂಘಟನೆ ಮಾಡುತ್ತಿರುವುದನ್ನು ಪಕ್ಷ ಮನಗಂಡಿದೆ. ಆದ್ದರಿಂದ ನನಗೆ ಈಗಾಗಲೇ ಟಿಕೆಟ್ ಖಚಿತವಾಗಿದ್ದು, ಯಾವುದೇ ಪ್ರಬಲ ಶಕ್ತಿಗಳಿಂದಲೂ ಟಿಕೆಟ್ ತಪ್ಪಿಸಲು ಸಾಧ್ಯವಿಲ್ಲ ಎಂದರು.

ಹೊಸಳ್ಳಿ ಮಲ್ಲೇಶ್ ಮಾತನಾಡಿ, ವಿನಯ್ ಕುಮಾರ್ ಅವರಂತಯ ವಿದ್ಯಾವಂತರಿಗೆ ಪಕ್ಷವು ಟಿಕೆಟ್ ನೀಡಲೇಬೇಕು. ಅವರು ಕ್ಷೇತ್ರದ ಕುಂದುಕೊರತೆಗಳನ್ನು ಆಲಿಸುತ್ತ ಪಕ್ಷನ್ನು ತಳಮಟ್ಟದಿಂದ ಪ್ರಬಲಗೊಳಿಸಿದ್ದಾರೆ ಎಂದರು.

ವಾಲ್ಮೀಕಿ ಮಹಿಳಾ ಘಟಕದ ತಾಲೂಕು ಅಧ್ಯಕ್ಷೆ ಎಚ್.ಟಿ. ವನಜಾಕ್ಷಿ ಮಾತನಾಡಿದರು. ಮುತ್ತಿಗಿ ಜಂಬಣ್ಣ, ಹುಲಿಯಪ್ಪನವರ ಬಸವರಾಜ, ಖುರ್ಷಿದ್ ಅಹ್ಮದ್, ಗುಡ್ಡಪ್ಪ, ಎಚ್.ಬಿ. ಬಸವರಾಜ, ಕೆಂಚಪ್ಪ, ರಾಘು ದೊಡ್ಡಮನಿ, ಶಿವಪುತ್ರ, ಲಕ್ಷ್ಮೀ ಹಾಗೂ ಇತರರಿದ್ದರು.



### ದೆಹಲಿಯ ರೈತರ ಹೋರಾಟ ಬೆಂಬಲಿಸಿ ಪಂಜಿನ ಮೆರವಣಿಗೆ

# ಸರ್ಕಾರಕ್ಕೆ ರೈತರ ಸಮಸ್ಯೆಯನ್ನು ಪರಿಹರಿಸುವ ಮನಸ್ಸಿಲ್ಲ

■ವಿಜಯಸಾಕ್ಷಿ ಸುದ್ದಿ, ಕೊಪ್ಪಳ

ದೆಹಲಿಯಲ್ಲಿ ನಡೆಯುತ್ತಿರುವ ರೈತ ಚಳವಳಿಯ ಮೇಲೆ ಕೇಂದ್ರ ಸರ್ಕಾರ ನಡೆಸಿರುವ ಪ್ಯಾಸಿಸ್ಟ್ ದಾಳಿಯನ್ನು ಖಂಡಿಸಿ, ಭಾರತ ಡಬ್ಲ್ಯೂ.ಟಿ.ಓ.ದಿಂದ ಹೊರ ಬರಲು ಒತ್ತಾಯಿಸಿ ದೇಶಾದ್ಯಂತ ಹೋರಾಟಕ್ಕೆ ಕರೆ ಕೊಟ್ಟಿದ್ದರಿಂದ, ಸಂಯುಕ್ತ ಹೋರಾಟ ಕರ್ನಾಟಕ ಎಸ್.ಕೆ.ಎಮ್ ಕರೆಯ ಮೇರೆಗೆ ಕೊಪ್ಪಳ ನಗರದಲ್ಲಿ ಪಂಜಿನ ಪ್ರತಿಭಟನಾ ಮೆರವಣಿಗೆ, ಬಹಿರಂಗ ಸಭೆ ನಡೆಸಲಾಯಿತು.

ದ್ವೇಷದ ಕೋಮುವಾದಿ ರಾಜಕೀಯದಲ್ಲಿ ಪ್ರಾಣ ಕಳೆದುಕೊಂಡ ಬಿಜೆಪಿಯ ಕಾರ್ಯಕರ್ತರಿಗೆ ತಲಾ 20ರಿಂದ 50 ಲಕ್ಷ ರೂ ಪರಿಹಾರ ಕೊಡುವ ಕೇಂದ್ರ ಸರ್ಕಾರ, ದೆಹಲಿಯ ಐತಿಹಾಸಿಕ ಚಳುವಳಿಯಲ್ಲಿ ಪ್ರಾಣ ಅರ್ಪಿಸಿದ 780 ರೈತರ ಕುಟುಂಬಕ್ಕೆ ಒಂದು ರೂಪಾಯಿ ಪರಿಹಾರ ಕೊಟ್ಟಿಲ್ಲ. ಭೀಕರ ಬರಗಾಲವನ್ನು ರಾಷ್ಟ್ರೀಯ ವಿಪತ್ತು ಎಂದು ಘೋಷಿಸಿಲ್ಲ. ರೈತರ ಸಾಲ ಮನ್ನಾ ಮಾಡಿಲ್ಲ, ಬೆಳೆ ನಷ್ಟ ಪರಿಹಾರ ಹಾಗೂ ಉದ್ಯೋಗ ಖಾತ್ರಿ ಕೂಲಿಯನ್ನು ಕೊಡುತ್ತಿಲ್ಲ.

ಈ ಸಂದರ್ಭದಲ್ಲಿ ಕರ್ನಾಟಕ ರೈತ ಸಂಘ ರಾಜ್ಯಾಧ್ಯಕ್ಷ ಡಿ.ಎಚ್. ಪೂಜಾರ್, ಅಖಿಲ ಭಾರತ ಕಾರ್ಮಿಕ ಸಂಘಟನೆಗಳ ಒಕ್ಕೂಟದ ಜಿಲ್ಲಾಧ್ಯಕ್ಷ ಬಸವರಾಜ್ ಶೀಲವಂತರ್, ಪ್ರಾಂತ ರೈತ ಸಂಘದ ಜಿಲ್ಲಾಧ್ಯಕ್ಷ ಜಿ.ನಾಗರಾಜ್, ಪ್ರಾಂತ ಕೃಷಿ ಕೂಲಿ ಕಾರ್ಮಿಕರ ಸಂಘದ ಜಿಲ್ಲಾ ಕಾರ್ಯದರ್ಶಿ ಸುಂಕಪ್ಪ ಗದಗ್, ಕೆ.ವಿ.ಎಸ್. ರಾಜ್ಯ ಕಾರ್ಯದರ್ಶಿ ದುರ್ಗೇಶ್, ಗುರುಬಸವ, ಸುನಿಲ್ ಜೋಶಿ, ಶರಣಬಸವ, ಸಿಐಟಿಯು ತಾಲೂಕಾ ಕಾರ್ಯದರ್ಶಿ ಗೌಸ್ ಸಾಬ್ ನದಾಫ, ಕರ್ನಾಟಕ ರೈತ ಸಂಘದ ಜಿಲ್ಲಾ ಕಾರ್ಯದರ್ಶಿ ಬಸವರಾಜ್ ನರೇಗಲ್, ಅಲೆಮಾರಿ ಸಂಘದ ಜಿಲ್ಲಾಧ್ಯಕ್ಷ ಸಂಜಯ್ ದಾಸ್ ಕೌಜಗೇರಿ, ಭೀಮ ಆರ್ಮಿ ಕರ್ನಾಟಕ ಏಕತಾ ಮಿಷನ್ ಜಿಲ್ಲಾಧ್ಯಕ್ಷ ನಿಂಗು ಜಿ.ಎಸ್. ಬೇಣಕಲ್, ಜನಪರ ಸಂಘಟನೆಗಳ ಒಕ್ಕೂಟದ ಜಿಲ್ಲಾ ಸಂಚಾಲಕ ಎಸ್.ಎ. ಗಫಾರ್, ಕರ್ನಾಟಕ ರಾಜ್ಯ ಕಟ್ಟಡ ಮತ್ತು ಕಲ್ಲು ಒಡೆಯುವ ಕ್ವಾರಿ ಕಾರ್ಮಿಕರ ಸಂಘದ ಜಿಲ್ಲಾ ಸಂಘಟನಾ ಸಂಚಾಲಕ ತುಕಾರಾಮ್ ಬಿ.ಪಾತ್ರೋಟಿ, ನಾಗರಾಜ್, ರಾಮಲಿಂಗಯ್ಯ ಶಾಸ್ತ್ರಿಮಠ ಮುಂತಾದವರು ಭಾಗವಹಿಸಿದ್ದರು.



> ಮಾತು ತಪ್ಪಿದ ಮೋದಿ ಸರ್ಕಾರದ ವಿರುದ್ಧ ಲಕ್ಷಾಂತರ ರೈತರು ದೆಹಲಿಯ ಗಡಿಯಲ್ಲಿ ಜೀವನ್ಮರಣ ಹೋರಾಟ ನಡೆಸಿದ್ದಾರೆ. ಹೋರಾಟ ನಿರತ ರೈತರ ಮೇಲೆ ಗೋಲಿಬಾರ್ ಮಾಡಿ ಕೊಂದು ಹಾಕಿದೆ. ಲಾಠಿ ಚಾರ್ಜ್ ಮಾಡಿರುವುದು ಮತ್ತು ಹೊಗೆ ಬಾಂಬ್ ಹಾಕಿರುವುದು, ರಸ್ತೆಗಳಿಗೆ ಮೊಳೆ ಹೊಡೆದಿರುವುದು, ರಸ್ತೆಗೆ ದೊಡ್ಡ ಗಾತ್ರದ ಕಾಂಕ್ರೀಟ್ ಬ್ಲಾಕ್ ಹಾಕಿರುವ ಬೆಳವಣಿಗೆ ಸರ್ಕಾರಕ್ಕೆ ರೈತರ ಸಮಸ್ಯೆಯನ್ನು ಪರಿಹರಿಸುವ ಮನಸ್ಸಿಲ್ಲ ಎನ್ನುವುದು ಸ್ಪಷ್ಟವಾಗಿದೆ. ಸರ್ಕಾರದ ಫ್ಯಾಸಿಸ್ಟ್ ನೀತಿಯ ವಿರುದ್ಧ ದೇಶದ ಜನರು ಬೀದಿಗಿಳಿಯಬೇಕು ಎಂದು ಕರೆ ನೀಡಿದರು.

## ಸರ್ಕಾರಗಳು ಕಾರ್ಪೋರೇಟ್ ಕಂಪನಿಗಳ ಕೈಗೊಂಬೆ



■ವಿಜಯಸಾಕ್ಷಿ ಸುದ್ದಿ, ಹೊಸಪೇಟೆ

2014ರಲ್ಲಿ ದೇಶದಲ್ಲಿಯ ಬಡವರ ಕಲ್ಯಾಣ, 2022ರ ವೇಳೆಗೆ ಪ್ರತಿ ಕುಟುಂಬಕ್ಕೆ ಪಕ್ಕಾ ಮನೆ ಮತ್ತು ಕಡಿಮೆ ವೆಚ್ಚದಲ್ಲಿ ವಸತಿ ಕಾರ್ಯಕ್ರಮ ಇತ್ಯಾದಿ ನೂರಾರು ಭರವಸೆಗಳನ್ನು ನೀಡುವ ಮೂಲಕ ಕೇಂದ್ರದಲ್ಲಿ ಅಧಿಕಾರಕ್ಕೆ ಬಂದಿರುವ ಎನ್.ಡಿ.ಎ ನೇತೃತ್ವದ ಸರ್ಕಾರ ಕಳೆದ 10 ವರ್ಷಗಳಿಂದ ಜನಪರವಾದ ಯೋಜನೆಗಳನ್ನು ಜಾರಿಗೆ ತರದೇ ಕೇವಲ ಕಾರ್ಪೋರೇಟ್ ಕಂಪನಿಗಳ ಕೈಗೊಂಬೆಯಾಗಿ ಜನವಿರೋಧಿ ಆಡಳಿತವನ್ನು ನಡೆಸುತ್ತಿದೆ ಎಂದು ಸ್ಲಂ ಜನಾಂದೋಲನ-ಕರ್ನಾಟಕ ರಾಜ್ಯ ಸಂಚಾಲಕ ಎ.ನರಸಿಂಹಮೂರ್ತಿ ಆಕ್ರೋಶ ವ್ಯಕ್ತ ಪಡಿಸಿದರು.

ಅವರು ಸ್ಲಂ ಜನಾಂದೋಲನ-ಕರ್ನಾಟಕ ಸಂಘಟನೆಯಿಂದ ವಿಜಯನಗರದ (ಹೊಸಪೇಟೆ)ಯ ಹುಲಗಿಯಲ್ಲಿ ಹಮ್ಮಿಕೊಂಡಿದ್ದ ಪ್ರಸಕ್ತ ವಿದ್ಯಾಮಾನಗಳ ಕುರಿತ ವಿಭಾಗ ಮಟ್ಟದ ಕಾರ್ಯಾಗಾರವನ್ನು ಉದ್ಘಾಟಿಸಿ ಮಾತನಾಡಿದರು.

2014 ಹಾಗೂ 2019ರಲ್ಲಿ ನಡೆದ ಲೋಕಸಭಾ ಚುನಾವಣೆ ಸಂದರ್ಭದಲ್ಲಿ ತಮ್ಮ ಪ್ರಣಾಳಿಕೆಯಲ್ಲಿ ಘೋಷಣೆ ಮಾಡಿದ ಕೇಂದ್ರ ಸರ್ಕಾರ ಈಗ ಜನರಿಗೆ ನೀಡಿರುವ ಭರವಸೆಗಳನ್ನು ಮರೆತು ಜನವಿರೋಧಿ ಯೋಜನೆಗಳು ಜಾರಿಗೆ ತರುತ್ತಿದೆ. ವಸತಿ, ಆರೋಗ್ಯ, ಆಹಾರ, ಶಿಕ್ಷಣವನ್ನು ಉಚಿತವಾಗಿ ನೀಡಬೇಕಾಗಿರುವ ಸರ್ಕಾರ ಈ ಸೇವೆಗಳನ್ನು ಖಾಸಗೀಕರಣಗೊಳಿಸಿ ಬಡವರನ್ನು ವಂಚಿಸುತ್ತಿದೆ ಎಂದು ಆರೋಪಿಸಿದರು.

ದಾವಣಗೇರಿ ಜಿಲ್ಲಾ ಸಂಚಾಲಕಿ ರೇಣುಕಾ ಯಲ್ಲಮ್ಮ, ಹೊಸಪೇಟೆ ಸಂಚಾಲಕಿ ವೆಂಕಮ್ಮ, ಬಳ್ಳಾರಿ ಜಿಲ್ಲಾ ಸಂಚಾಲಕ ಶೇಖರಬಾಬು, ಗದಗ ಜಿಲ್ಲಾ ಸ್ಲಂ ಸಮಿತಿ ಉಪಾಧ್ಯಕ್ಷ ರವಿಕುಮಾರ ಬೆಳಮಕರ, ಕಾರ್ಯದರ್ಶಿ ಅಶೋಕ ಕುಸಬಿ, ಹುಬ್ಬಳ್ಳಿ ಜಿಲ್ಲಾ ಸಂಚಾಲಕಿ ಶೋಭಾ ಕಮತರ ವೇದಿಕೆ ಮೇಲೆ ಉಪಸ್ಥಿತರಿದ್ದರು.

ಗದಗ ಜಿಲ್ಲಾ ಸ್ಲಂ ಸಮಿತಿ ಮುಖಂಡರಾದ ಪರವೀನಬಾನು ಹವಾಲ್ದಾರ, ಇಬ್ರಾಹಿಂ ಮುಲ್ಲಾ, ಮೆಹರುನಿಸಾ ಢಾಲಾಯತ, ಖಾಜಾಸಾಬ ಇಸ್ಮಾಯಿಲನವರ, ಬಾಷಾಸಾಬ ಡಂಬಳ, ಮಕ್ತುಮಸಾಬ ಮುಲ್ಲಾನವರ, ನಜಮುನಿಸಾ ಮುರಗೋಡ ಸೇರಿದಂತೆ ನೂರಾರು ಸ್ಲಂ ನಿವಾಸಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿದರು. ವೆಂಕಮ್ಮ ಕಾರ್ಯಕ್ರಮ ನಿರೂಪಿಸಿ ವಂದಿಸಿದರು.

## ನಜ್ಮಾ ಸಿದ್ನೆಕೊಪ್ಪಗೆ 'ಉತ್ತಮ ಶಿಕ್ಷಕಿ' ಪ್ರಶಸ್ತಿ

■ವಿಜಯಸಾಕ್ಷಿ ಸುದ್ದಿ, ಗದಗ


ಗದಗ ಶಹರ ವಲಯದ ಉರ್ದು ಶಾಲೆಗಳ ಶಿಕ್ಷಕರಿಗೆ ನೀಡುವ ಉತ್ತಮ ಶಿಕ್ಷಕ-ಶಿಕ್ಷಕಿ ಪ್ರಶಸ್ತಿಗೆ ಸ್ಥಳೀಯ ಅಂಜುಮನ್ ಹಿರಿಯ ಪ್ರಾಥಮಿಕ ಶಾಲಾ ಶಿಕ್ಷಕಿ ನಜ್ಮಾಬೇಗಂ ಸಿದ್ನೆಕೊಪ್ಪ ಭಾಜನರಾಗಿದ್ದಾರೆ.

ಈಚೆಗೆ ರಾಜೀವಗಾಂಧಿ ನಗರದ ಸರ್ಕಾರಿ ಉರ್ದು ಹಿರಿಯ ಪ್ರಾಥಮಿಕ ಶಾಲೆ ನಂ.4ರಲ್ಲಿ ನಡೆದ ಗದಗ ಶಹರ ವಲಯದ ಉರ್ದು ಪ್ರಾಥಮಿಕ ಶಾಲಾ ಶಿಕ್ಷಕರ ಶೈಕ್ಷಣಿಕ ಕಾರ್ಯಾಗಾರ ಹಾಗೂ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಗದಗ ಶಹರ ಕ್ಷೇತ್ರ ಶಿಕ್ಷಣಾಧಿಕಾರಿ ಆರ್.ಎಸ್. ಬುರಡಿ, ಶಾಲಾ ಶಿಕ್ಷಣ ಇಲಾಖೆ ಉಪ ನಿರ್ದೇಶಕ (ಅಭಿವೃದ್ಧಿ) ಜಿ.ಎಲ್. ಬಾರಾಟಕ್ಕೆ, ಡಯಟ್ ಹಿರಿಯ ಉಪನ್ಯಾಸಕಿ ಎಂ.ಎಂ. ಕರ್ಜಗಿ, ಗದಗ ಶಹರ ಕ್ಷೇತ್ರ ಸಮನ್ವಯಾಧಿಕಾರಿ ಎಚ್.ಎ. ಫಾರುಖಿ, ಉಪನಿರ್ದೇಶಕರ ಕಚೇರಿ ಉರ್ದು ಇಸಿಓ ರಿಜ್ವಾನ್ ಕವಲಗೇರಿ, ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಚೇರಿ ಶಿಕ್ಷಣ ಸಂಯೋಜಕ ಐ.ಬಿ. ಮಡಿವಾಳರ, ಗದಗ ಶಹರ ಯುಆರ್‌ಸಿ ಶಿಕ್ಷಣ ಸಂಯೋಜಕ ಪಿ.ಡಿ. ಮಂಗಳೂರ, ಸಮೂಹ ಸಂಪನ್ಮೂಲ ವ್ಯಕ್ತಿ ಕೆ.ಎ. ಜಲಗೇರಿ ಸೇರಿ ಹಲವರಿದ್ದರು.




## ಹದವರಿತು ಬಳಸಿದರೆ ಮಾತು ಮಾಣಿಕ್ಯ



■ವಿಜಯಸಾಕ್ಷಿ ಸುದ್ದಿ, ಗದಗ

ಭಾಷೆಯೆಂಬುದು ಒಂದು ವರ. ಅದನ್ನು ಅರಿತು ಪದ ಪ್ರಯೋಗ ಮಾಡುವದರಿಂದ ಅರ್ಥವತ್ತತೆ ಉಂಟಾಗುತ್ತದೆ. ಇಂಗ್ಲೀಷ್ ಹಾಗೂ ಕನ್ನಡ ಪದಗಳ ಉಚ್ಚಾರಣೆಯಲ್ಲಿ ನಾವು ಕೆಲ ಪದ ಬಳಕೆಯಲ್ಲಿ ವ್ಯತ್ಯಾಸವನ್ನು ಕಾಣುತ್ತೇವೆ. ಕನ್ನಡ ಭಾಷೆ ಬಹಳ ಸುಂದರವಾದ್ದು, ಮಹಾಲಿಂಗರಂಗ ಕವಿ ಇದನ್ನು ಪ್ರಶಂಸಿದ್ದಾನೆ. ಪದಗಳನ್ನು ಬಳಸುವಾಗ ಹದವರಿತು ಬಳಸಿದರೆ ಮಾತು ಮಾಣಿಕ್ಯವೆನಿಸುತ್ತದೆ ಎಂದು ಜಗದ್ಗುರು ಸದಾಶಿವಾನಂದ ಶ್ರೀಗಳು ತಿಳಿಸಿದರು.

ಶ್ರೀ.ಜಗದ್ಗುರು ಶಿವಾನಂದ ಪ.ಪೂ ಕಾಲೇಜಿನಲ್ಲಿ ದ್ವಿತೀಯ ಪಿಯುಸಿ ಇಂಗ್ಲೀಷ್ ಸ್ಟಡಿ ಮಟೀರಿಯಲ್ ವಿತರಿಸಿ ಅವರು ಮಾತನಾಡಿದರು.

ಉಪನ್ಯಾಸಕರಾದ ಶ್ರೀನಿವಾಸ ಬಡಿಗೇರ, ಅಶೋಕ ಬಡಿಗೇರ ಹಾಗೂ ಎಸ್.ಎಂ. ಸಣ್ಣೆಲಿ ಅವರನ್ನು ಸನ್ಮಾನಿಸಲಾಯಿತು. ಮಂಜುನಾಥ ಬಾರ್ಕಿ ಸ್ವಾಗತಿಸಿದರು. ಕಾಲೇಜಿನ ಎಲ್ಲ ಸಿಬ್ಬಂದಿಗಳು ಉಪಸ್ಥಿತರಿದ್ದರು.

## ಇಂದು ರಸ್ತೆ ಸಂಚಾರ ಸಮೀಕ್ಷೆ

■ವಿಜಯಸಾಕ್ಷಿ ಸುದ್ದಿ, ಗದಗ

ರಾಜ್ಯ ಸರ್ಕಾರದ ಲೋಕೋಪಯೋಗಿ ಇಲಾಖೆಯಿಂದ 2023-24ನೇ ಸಾಲಿನ ರಸ್ತೆ ಸಂಚಾರ ಸಮೀಕ್ಷೆಯನ್ನು ಫೆಬ್ರವರಿ 29ರ ಬೆಳಿಗ್ಗೆ 6 ಗಂಟೆಯಿಂದ ಮಾರ್ಚ್ 2 ರ ಬೆಳಿಗ್ಗೆ 6 ಗಂಟೆಯವರೆಗೆ ಸತತವಾಗಿ ಎರಡು ದಿನಗಳ ಕಾಲ ಇಲಾಖೆಯ ಎಲ್ಲ ರಾಜ್ಯ ಹೆದ್ದಾರಿ ಹಾಗೂ ಆಯ್ದ ಜಿಲ್ಲಾ ಮುಖ್ಯ ರಸ್ತೆಗಳಲ್ಲಿ ಕೈಗೊಳ್ಳಲಾಗುತ್ತಿದೆ.

ಇದಕ್ಕಾಗಿ ರಸ್ತೆಗಳ ಬದಿಯಲ್ಲಿ ತಾತ್ಕಾಲಿಕವಾಗಿ ನಿರ್ಮಿಸಲಾದ ಸಮೀಕ್ಷಾ ಕೇಂದ್ರಗಳ ಸ್ಥಳಗಳಲ್ಲಿ ರಸ್ತೆಯ ಮೇಲೆ ಸಂಚರಿಸುವ ಎಲ್ಲ ವಾಹನ ಚಾಲಕರು ನಿಧಾನವಾಗಿ ವಾಹನ ಚಲಾಯಿಸುವ ಮೂಲಕ ಸಹಕಾರ ನೀಡಬೇಕು ಎಂದು ಧಾರವಾಡ ಲೋಕೋಪಯೋಗಿ ಇಲಾಖೆ ಅಧೀಕ್ಷಕ ಅಭಿಯಂತರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಶ್ರೀ ಶಿವಾನಂದ ಬೃಹನ್ಮಠದ ಸದ್ಭಕ್ತರ ಸಭೆ ಇಂದು

■ವಿಜಯಸಾಕ್ಷಿ ಸುದ್ದಿ, ಗದಗ

ಅದ್ವೈತ ಪರಂಪರೆಯ ಜಗದ್ಗುರು ಶ್ರೀ ಶಿವಾನಂದ ಬೃಹನ್ಮಠದಲ್ಲಿ ಮಾರ್ಚ್ 8ರಂದು ಶ್ರೀ ಮಹಾಶಿವರಾತ್ರಿ ಮಹೋತ್ಸವ ಆಚರಿಸುವ ಹಿನ್ನೆಲೆಯಲ್ಲಿ ಫೆ.29ರಂದು ಮುಂಜಾನೆ 11 ಗಂಟೆಗೆ ಶ್ರೀ ಮಠದ ಸದ್ಭಕ್ತರ ಸಭೆಯನ್ನು ಮಠದ ಆವರಣದಲ್ಲಿ ಕರೆಯಲಾಗಿದೆ.

ಸಭೆಯಲ್ಲಿ ಮಠದ ಸದ್ಭಕ್ತರೆಲ್ಲರೂ ಪಾಲ್ಗೊಳ್ಳುವಂತೆ ಸಂಘಟಿಕರಾದ ಸಂತೋಷ ಎಮ್.ಕಬಾಡರ ಪತ್ರಿಕಾ ಪ್ರಕಟಣೆ ಮೂಲಕ ತಿಳಿಸಿದ್ದಾರೆ.

## ಸಂತೆ ಕರ ಬಹಿರಂಗ ಲಿಲಾವು

■ವಿಜಯಸಾಕ್ಷಿ ಸುದ್ದಿ, ಗದಗ

ಲಕ್ಷ್ಮೇಶ್ವರ ಪುರಸಭೆ ವ್ಯಾಪ್ತಿಯಲ್ಲಿ ಬರುವ ದಿನವಹಿ/ ವಾರದ ಸಂತೆ ಕರದ ಬಹಿರಂಗ ಲಿಲಾವನ್ನು ಮಾರ್ಚ್ 6 ರಂದು ಬೆಳಿಗ್ಗೆ 11 ಗಂಟೆಗೆ ಲಕ್ಷ್ಮೇಶ್ವರ ಪುರಸಭೆ ಸಭಾಭವನದಲ್ಲಿ ಮಾಡಲಾಗುವುದು.

ಹೆಚ್ಚಿನ ಮಾಹಿತಿಗಾಗಿ ಲಕ್ಷ್ಮೇಶ್ವರ ಪುರಸಭೆ ಕಾರ್ಯಾಲಯದ ಮುಖ್ಯಾಧಿಕಾರಿಗಳು ಅಥವಾ ಕಂದಾಯ ವಿಭಾಗವನ್ನು ಸಂಪರ್ಕಿಸಬಹುದಾಗಿದೆ.

### ‘ಪಂಚವಟಿ’ ಅಭಿಯಾನ ಕಾರ್ಯಕ್ರಮದಲ್ಲಿ ಮಲ್ಲಿಕಾರ್ಜುನ ರಡ್ಡೇರ

# ಬದಲಾವಣೆಯಿಂದ ನೆಮ್ಮದಿಯ ಬದುಕು ಸಾಧ್ಯ



■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

‘ವೃಕ್ಷೋ ರಕ್ಷತಿ ರಕ್ಷಿತಃ’ ಎಂಬಂತೆ ಪ್ರಸ್ತುತ ದಿನಮಾನದಲ್ಲಿ ಎಲ್ಲಕ್ಕಿಂತ ಅತ್ಯವಶ್ಯವಾದ ಪ್ರಕೃತಿ ಮಾತೆಯನ್ನು ಪೂಜ್ಯನೀಯ ಭಾವನೆಯಿಂದ ಕಂಡು, ಉಳಿಸಿ-ಬೆಳೆಸಿ, ಪೋಷಿಸುವ ಸತ್ ಸಂಕಲ್ಪವನ್ನು ಎಲ್ಲರೂ ಮಾಡಬೇಕಾಗಿದೆ ಎಂದು ಹುಬ್ಬಳ್ಳಿಯ ವರದಶ್ರೀ ಫೌಂಡೇಶನ್ ಸಂಸ್ಥಾಪಕ ಮಲ್ಲಿಕಾರ್ಜುನ ರಡ್ಡೇರ ಹೇಳಿದರು.

ಅವರು ಬುಧವಾರ ಹುಬ್ಬಳ್ಳಿಯ ವರದಶ್ರೀ ಫೌಂಡೇಶನ್ ವತಿಯಿಂದ ಪಟ್ಟಣದ ಈಶ್ವರೀಯ ವಿಶ್ವವಿದ್ಯಾಲಯದಲ್ಲಿ ಪುರಸಭೆ ಹಾಗೂ ಸಂಘಟನೆಗಳ ಸಹಯೋಗದಲ್ಲಿ ನಡೆದ ಪಂಚವಟಿ (ಆಕ್ಸಿಜನ್ ಟಾವರ್) ಅಭಿಯಾನ ಕಾರ್ಯಕ್ರಮದಲ್ಲಿ ಮಾತನಾಡಿದರು.

ನಿತ್ಯ ಬದುಕಿನ ಪ್ರಾರಂಭ ಪರಿಸರಕ್ಕೆ ಮಾರಕವಾದ ಪ್ಲಾಸ್ಟಿಕ್‌ನಿಂದಲೇ ಆಗುತ್ತಿದೆ. ಇದಕ್ಕೆ ಕಾರಣವಾಗುವ ಪ್ರತಿಯೊಬ್ಬರೂ ಈಗಲೇ ಎಚ್ಚೆತ್ತುಕೊಳ್ಳದಿದ್ದರೆ ಭವಿಷ್ಯದಲ್ಲಿ ದೊಡ್ಡ ಗಂಡಾಂತರವನ್ನೇ ಎದುರಿಸಬೇಕಾಗುತ್ತದೆ. ಈ ನಿಟ್ಟಿನಲ್ಲಿ ಪಾಲಕರು, ಬಾಲಕರು, ಶಿಕ್ಷಕರು, ಕೃಷಿಕರು, ಸೈನಿಕರು, ನಾಯಕರು ಎಲ್ಲರೂ ಬದಲಾದರೆ ನೆಮ್ಮದಿಯ ಬದುಕು ಸಾಧ್ಯ. ದೇವರ ಸ್ವರೂಪದಲ್ಲಿಯೇ ಪೂಜಿಸಲ್ಪಡುವ ಪಂಚವಟಿ ಗಿಡಗಳು ಹೆಚ್ಚು ಆಮ್ಲಜನಕ ಉತ್ಪತ್ತಿ ಮಾಡಿ ವಾತಾವರಣ ಶುದ್ಧಗೊಳಿಸುವ ದೈವೀಶಕ್ತಿ ಗುಣಗಳನ್ನು ಹೊಂದಿವೆ. ಪಟ್ಟಣದ ಹಲವೆಡೆ ಪಂಚವಟಿ ವೃಕ್ಷ ನೆಡಲಾಗುತ್ತಿದ್ದು, ಬರುವ ಮಳೆಗಾಲದಲ್ಲಿ ಇನ್ನೂ ಅನೇಕ ಕಡೆ ಈ ಕಾರ್ಯ ನಡೆಸಲಾಗುವುದು ಎಂದರು.

ಈಶ್ವರೀಯ ವಿಶ್ವವಿದ್ಯಾಲಯದ ಹಿರಿಯರಾದ ಬಿ.ಕೆ. ಪ್ರಕಾಶ ಮಾತನಾಡಿ, ನಿತ್ಯ ಬದುಕಿನಲ್ಲಿ ಆಧ್ಯಾತ್ಮ, ಧ್ಯಾನ, ಪ್ರಾರ್ಥನೆ ಅಳವಡಿಸಿಕೊಳ್ಳಬೇಕು. ಮಕ್ಕಳಿಗೆ ಆಸ್ತಿ-ನೌಕರಿ ಕೊಡಿಸುವ ಜತೆಗೆ ಸಾಮಾಜಿಕ ಕಳಕಳಿಯ ಮತ್ತು ಬದುಕಿನ ಮೌಲ್ಯಗಳ ಶಿಕ್ಷಣ ನೀಡಿ. ಮಾನವ ಕಲ್ಯಾಣದ ಎಲ್ಲ ಅಂಶಗಗಳು ಪರಿಸರದಲ್ಲಿವೆ. ಎಲ್ಲರೂ ಸೇರಿ ಪ್ರಕೃತಿಯ ಬಗ್ಗೆ ಪೂಜ್ಯನೀಯ ಭಾವನೆ ಹೊಂದಬೇಕು ಎಂದರು.

ಪುರಸಭೆ ಮುಖ್ಯಾಧಿಕಾರಿ ಮಹೇಶ ಹಡಪದ ಮಾತನಾಡಿ, ಪರಿಸರ ಮಾಲಿನ್ಯ ನಿವಾರಣೆ, ಆರೋಗ್ಯಕರ ವಾತಾವರಣ ನಿರ್ಮಾಣ ಮಾಡುವ, ಶ್ರೇಷ್ಠ ಶಕ್ತಿಯುಳ್ಳ ಪಂಚವಟಿ ಗಿಡಗಳನ್ನು ವರದಶ್ರೀ ಫೌಂಡೇಶನ್ ಸಹಕಾರದೊಂದಿಗೆ ಪಟ್ಟಣದ ಉದ್ಯಾನವನ, ಸಾರ್ವಜನಿಕ ಸ್ಥಳ, ಶಾಲೆ-ದೇವಸ್ಥಾನಗಳಲ್ಲಿ ನೆಡಲು ಪುರಸಭೆ ಸಹಕಾರ ನೀಡಲಿದೆ. ಪುರಸಭೆ ಮಾಡುವ ಸ್ವಚ್ಛತಾ ಕಾರ್ಯಕ್ಕೆ ನಾಗರಿಕರು ಕೈ ಜೋಡಿಸಬೇಕು ಎಂದರು.

ಈ ವೇಳೆ ಹಿರಿಯರಾದ ಜಯಲಕ್ಷ್ಮೀ ಗಡ್ಡದೇವರಮಠ, ವರದಶ್ರೀ ಫೌಂಡೇಶನ್‌ನ ಕಾರ್ಯದರ್ಶಿ ಕೆ.ಎಸ್. ಶಿರಸಂಗಿ, ಚಂಬಣ್ಣ ಬಾಳಿಕಾಯಿ, ಡಾ. ಶ್ರೀಕಾಂತ ಕಾಟೇವಾಲೆ, ಡಾ. ಗಿರೀಶ ಮರಡ್ಡಿ, ಡಾ. ಪ್ರಸನ್ ಕುಲಕರ್ಣಿ, ಜಯಣ್ಣ ಮೇಗಿಲಮನಿ, ಎ.ಬಿ. ಸವಣೂರ, ಬಸವರಾಜ ಸಂಗಪ್ಪಶೆಟ್ಟರ, ಎನ್.ಎಂ. ವಾಲಿ, ಎಸ್.ಜಿ. ಹೂವಿನ, ಎ.ಎಚ್. ಅಮರಶೆಟ್ಟಿ, ಮಾಂತೇಶ ಗೋಣೆಪ್ಪನವರ, ಎ.ಬಿ. ಪಾಟೀಲ, ರಾಜಯೋಗಿನಿಯರಾದ ಸುಮಂಗಲಾ, ಉಮಕ್ಕ, ಅನಿತಾ ಉಪಸ್ಥಿತರಿದ್ದರು. ರಾಜಯೋಗಿನಿ ಬಿ.ಕೆ. ನಾಗಲಾಂಬಿಕೆ, ಎಸ್.ಎ. ಬಣಗಾರ ನಿರೂಪಿಸಿದರು.

### ಪಂಚವಟಿ ವೃಕ್ಷ ಮಹತ್ವ

**ಬಿಲ್ವಪತ್ರೆ:** ಬಿಲ್ವಪತ್ರೆಯ ಗಿಡಗಳಲ್ಲಿ ಶಿವನು ನೆಲೆಸಿರುವನೆಂಬ ನಂಬಿಕೆ ಇದೆ. ಎಲೆ, ಕಾಂಡ, ಬೇರು, ತೊಗಟೆ ಮತ್ತು ಹಣ್ಣುಗಳ ಆರೋಗ್ಯದ ಅನೇಕ ಕಾರಣಗಳಿಗೆ ಉಪಯೋಗಿಸಲಾಗುತ್ತಿದ್ದು, ಪಂಚವಟಿ ನಿರ್ಮಾಣದಲ್ಲಿ ಮೊದಲ ಆದ್ಯತೆಯಿದೆ.

**ಬನ್ನಿಗಿಡ:** ಪಾಂಡವರು ವನವಾಸದಲ್ಲಿದ್ದಾಗ ತಮ್ಮ ಶಸ್ತ್ರಾಸ್ತ್ರ, ಆಯುಧಗಳ ರಕ್ಷಣೆಗೆ ಬಳಸಿದ್ದ ಈ ಗಿಡದ ಎಲೆಯನ್ನು ವಿಜಯದಶಯಮಿಯಂದು ಬಾಂಧವ್ಯ ಹಬ್ಬಕ್ಕೆ ಬಳಸಲಾಗುತ್ತದೆ. ಬನ್ನಿ ಆಮ್ಲಜನಿಕ ಕೊಡುವ ಮರಗಳಲ್ಲಿ 2ನೇಯದ್ದಾಗಿದೆ.

**ಬೇವು:** ಅನೇಕ ರೋಗಗಳನ್ನು ಗುಣಪಡಿಸಲು ರಾಮಬಾಣವಾಗಿ ಬಳಸುತ್ತಾರೆ. ರೋಗ ನಿರೋಧಕ ಶಕ್ತಿ ಹೊಂದಿದ್ದು, ಹೆಚ್ಚಿನ ಆಮ್ಲಜನಕ ಬಿಡುಗಡೆಗೊಳಿಸುತ್ತದೆ.

**ಅರಳಿ:** ಅರಳಿ ವೃಕ್ಷದ ಬುಡದಲ್ಲಿ ಬ್ರಹ್ಮ, ಮಧ್ಯದಲ್ಲಿ ವಿಷ್ಣು, ಮೇಲ್ತುದಿಯಲ್ಲಿ ಶಿವ ನೆಲೆಸಿರುವ ನಂಬಿಕೆಯಿಂದ ಪೂಜಿಸಲಾಗುತ್ತದೆ. ಹೆಚ್ಚು ಆಮ್ಲಜನಿಕ ನೀಡುವ ವೃಕ್ಷವಾಗಿದೆ.

**ಅತ್ತಿ:** ಅತ್ತಿ ಆಲದ ಮರದ ಸೋದರ ಬಂಧುವಂತೆ. ಅತ್ತಿ ಹಣ್ಣು ಕಣ್ಣಿನ ಯಾವುದೇ ರೋಗ ಗುಣಪಡಿಸುವ ಶಕ್ತಿ ಹೊಂದಿದ್ದು, ಆಮ್ಲಜನಿಕ ಉತ್ಪತ್ತಿ ಮಾಡುವ ಪಂಚವಟಿಗಳಲ್ಲೊಂದಾಗಿದೆ.

## ಉತ್ತಮ ಮಳೆ-ಬೆಳೆಯಿಂದ ಸಮೃದ್ಧಿ



■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಪಟ್ಟಣದ ಪುರಾತನ ಶ್ರೀ ಗಡ್ಡದೇವರಮಠದಲ್ಲಿ ಮಹಿಳಾ ಸಂಘಟನೆಗಳು ಶ್ರೀಮಠದ ಸಹಯೋಗದಲ್ಲಿ ಸಮೃದ್ಧ-ಮಳೆ ಬೆಳೆಗಾಗಿ ಪ್ರಾರ್ಥಿಸಿ ವಿಶೇಷ ಪೂಜೆ ಮತ್ತು ಉಡಿ ತುಂಬಿಸುವ ಕಾರ್ಯಕ್ರಮ ನೆರವೇರಿಸಲಾಯಿತು.

ಈ ವೇಳೆ ಮಾತನಾಡಿದ ಜಯಲಕ್ಷ್ಮೀ ಗಡಗಡ್ಡದೇವರಮಠ, ನಾಡಿನಲ್ಲಿ ಸಮೃದ್ಧ ಮಳೆಯಾದರೆ ಉತ್ತಮ ಬೆಳೆ ಬಂದು ರೈತರ ಸಂಕಷ್ಟಗಳು ದೂರವಾಗುತ್ತವೆ. ಮುತ್ತೈದೆಯರಿಗೆ ಉಡಿ ತುಂಬುವದು ಅತ್ಯಂತ ಪುಣ್ಯದ ಕಾಯಕವಾಗಿದೆ. ಬರಗಾಲದಿಂದ ರೈತರು ತತ್ತರಿಸುತ್ತಿದ್ದು, ರೈತರ ಸಂಕಷ್ಟಗಳನ್ನು ದೂರ ಮಾಡುವ ಮತ್ತು ದೇಶದಲ್ಲಿ ಶಾಂತಿ ನೆಲೆಸುವಂತೆ ಲೋಕ ಕಲ್ಯಾಣಕ್ಕಾಗಿ ಈ ವಿಶೇಷ ಪೂಜಾ ಕಾರ್ಯಕ್ರಮವನ್ನು ಮಹಿಳಾ ಸಂಘಟನೆಯವರು ನಡೆಸಿರುವುದು ಪ್ರಶಂಸನೀಯ ಎಂದರು.

ಶ್ರೀ ಜಗನ್ಮಾತೆಯ ಪೂಜೆ, ಪಟ್ಟಣದ ಜಗದ್ಗುರು ರೇಣುಕಾಚಾರ್ಯ ರುದ್ರ ಬಳಗದಿಂದ ಲಲಿತಾ ಸಹಸ್ರನಾಮ ಪಠಣ ಮತ್ತು ಮಹಿಳೆಯರಿಗೆ ಉಡಿತುಂಬುವ ಕಾರ್ಯಕ್ರಮ ಜರುಗಿ-ತು. ಈ ವೇಳೆ ಸುಲೋಚನಾ ಲಿಂಬಯ್ಯಸ್ವಾಮಿಮಠ, ವನಿತಾ ಓದುನವರ, ದಿವ್ಯಾ ಲಿಂಬಯ್ಯಸ್ವಾಮಿಮಠ, ವಾಣಿ ಓದುನವರ, ಅಕ್ಷತಾ ಬಸವ, ಶ್ವೇತಾ ಲಿಂಬಯ್ಯಸ್ವಾಮಿಮಠ, ನಾಗರತ್ನಾ ಅಂಕಲಕೋಟಿ, ದಿವ್ಯಾ ಮಾನ್ವಿ ಸೇರಿದಂತೆ ವಿವಿಧ ಮಹಿಳಾ ಸಂಘಟನೆಗಳ ನೂರಾರು ಮಹಿಳೆಯರು, ಶ್ರೀಮಠದ ಭಕ್ತರು ಇದ್ದರು.

### ಪ್ರವಾಸಿ ಮಂದಿರದಲ್ಲಿ ಬಂಜಾರ ಸಮಾಜ ಬಾಂಧವರನ್ನೊಳಗೊಂಡ ಸಭೆ

# ಸಂತ ಸೇವಾಲಾಲರ ಜಯಂತ್ಯುತ್ಸವ ಇಂದು

■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಬಂಜಾರ ಸಮುದಾಯದ ಆರಾಧ್ಯ ದೈವ ಸಂತ ಶ್ರೀ ಸೇವಾಲಾಲರ 285ನೇ ಜಯಂತ್ಯುತ್ಸವದ ನಿಮಿತ್ತ ಫೆ.29ರ ಬೆಳಿಗ್ಗೆ 10ಕ್ಕೆ ಪಟ್ಟಣದ ಪಂಪ ವೃತ್ತದಿಂದ ಸೇವಾಲಾಲ್ ಮಹಾರಾಜರ ಭಾವಚಿತ್ರದ ಭವ್ಯ ಮೆರವಣಿಗೆ ಹಾಗೂ ಮಧ್ಯಾಹ್ನ 2.30ಕ್ಕೆ ಸೋಮೇಶ್ವರ ದೇವಸ್ಥಾನದ ತೇರಿನ ಮನೆ ಆವರಣದಲ್ಲಿ ಧರ್ಮಸಭೆ ಸಮಾರಂಭ ನಡೆಯಲಿದೆ ಎಂದು ಕರ್ನಾಟಕ ಪ್ರದೇಶದ ಬಂಜಾರ ಕಲ್ಯಾಣ ಸಂಘದ ತಾಲೂಕಾ ಅಧ್ಯಕ್ಷ ಶಿವಣ್ಣ ಲಮಾಣಿ ಹೇಳಿದರು.

ಅವರು ಪಟ್ಟಣದ ಪ್ರವಾಸಿ ಮಂದಿರದಲ್ಲಿ ಬಂಜಾರ ಸಮಾಜ ಬಾಂಧವರನ್ನೊಳಗೊಂಡ ಸಭೆಯಲ್ಲಿ ಮಾಹಿತಿ ನೀಡಿ, ಫೆ.29ರಂದು ಬೆಳಿಗ್ಗೆ 10 ಗಂಟೆಗೆ ಪಟ್ಟಣದ ಪಂಪ ವೃತ್ತದಿಂದ ಪೂರ್ಣಕುಂಭ, ಕಲಾತಂಡದೊಂದಿಗೆ ಪ್ರಮುಖ ಮಾರ್ಗದಲ್ಲಿ ಸೇವಾಲಾಲ್ ಮಹಾರಾಜರ ಭಾವಚಿತ್ರದ ಮೆರವಣಿಗೆ ಜರುಗಲಿದೆ. ಶಿರಹಟ್ಟಿ/ಲಕ್ಷ್ಮೇಶ್ವರ ತಾಲೂಕಿನ ಸಾವಿರಾರು ಸಮಾಜ ಬಾಂಧವರು ಸಂಪ್ರದಾಯ ಬದ್ಧವಾದ ಉಡುಪುಗಳನ್ನು ಧರಿಸಿ ಮೆರವಣಿಗೆಯಲ್ಲಿ ಪಾಲ್ಗೊಳ್ಳಲಿದ್ದಾರೆ. ಮಧ್ಯಾಹ್ನ 2.30ಕ್ಕೆ ಶ್ರೀ ಸೋಮೇಶ್ವರ ದೇವಸ್ಥಾನದ ತೇರಿನ ಮನೆ ಆವರಣದಲ್ಲಿ ಧರ್ಮಸಭೆ ಜರುಗಲಿದೆ. ಶಿರಹಟ್ಟಿ ಫಕ್ಕೀರೇಶ್ವರ ಮತ್ತು ಬಾಲೆಹೊಸೂರಿನ ಮಠದ ಶ್ರೀ ಫಕೀರ ದಿಂಗಾಲೇಶ್ವರ ಮಹಾಸ್ವಾಮಿಗಳು, ಲಿಂಗಸೂರಿನ ವಿಜಯ ಮಹಾಂತೇಶ್ವರಮಠದ ಜ.ಸಿದ್ಧಲಿಂಗ ಶ್ರೀಗಳು, ಚಿತ್ರದುರ್ಗ ಸೇವಾಲಾಲ ಗುರುಪೀಠದ ಸರ್ದಾರ ಸೇವಾಲಾಲ ಮಹಾರಾಜರು ಸಾನ್ನಿಧ್ಯ ವಹಿಸುವರು. ಶಾಸಕ ಡಾ.ಚಂದ್ರು ಲಮಾಣಿ ಅಧ್ಯಕ್ಷತೆ ವಹಿಸುವರು.

ಈ ವೇಳೆ ಗುರಪ್ಪ ಲಮಾಣಿ, ಶಿವಣ್ಣ ಲಮಾಣಿ, ಮಾನಪ್ಪ ನಾಯಕ, ದೇವಪ್ಪ ಲಮಾಣಿ, ಜಾನು ಲಮಾಣಿ, ಶಿವಣ್ಣ ಲಮಾಣಿ, ಶೇಖಪ್ಪ ಲಮಾಣಿ, ಸೋಮು ಲಮಾಣಿ, ಈರಣ್ಣ ಚವ್ಹಾಣ, ಥಾವರಪ್ಪ ಲಮಾಣಿ, ಪರಮೇಶ ಲಮಾಣಿ, ಲಕ್ಷ್ಮಣ ಲಮಾಣಿ, ಮಹೇಶ ಲಮಾಣಿ, ದುಂಡಪ್ಪ ಲಮಾಣಿ, ಈಶಪ್ಪ ಲಮಾಣಿ, ಸೋಮರೆಡ್ಡಿ ಲಮಾಣಿ, ಗಣೇಶ ಲಮಾಣಿ, ಪುಂಡಲೀಕ ಲಮಾಣಿ ಸೇರಿ ಹಲವರಿದ್ದರು.



ಜಿಲ್ಲಾ ಉಸ್ತುವಾರಿ ಸಚಿವರಾದ ಹೆಚ್.ಕೆ. ಪಾಟೀಲ, ಶಾಸಕ ಸಿ.ಸಿ. ಪಾಟೀಲ ಸಭೆಯನ್ನು ಉದ್ಘಾಟಿಸುವರು. ಮಾಜಿ ಶಾಸಕರಾದ ರಾಮಣ್ಣ ಲಮಾಣಿ, ಜಿ.ಎಂ. ಮಹಾಂತಶೆಟ್ಟರ, ಜಿ.ಎಸ್. ಗಡ್ಡದೇವರಮಠ ಬಂಜಾರ ಭವನ ಭೂಮಿಪೂಜೆ ನೆರವೇರಿಸುವರು. ಬಂಜಾರ ಶ್ರೀ ಸೇವಾಲಾಲ ಕಲ್ಯಾಣ ಸಂಘದ ತಾಲೂಕಾಧ್ಯಕ್ಷ ದೀಪಕ ಲಮಾಣಿ, ಸಂಸದರು, ಶಾಸಕರು, ರಾಜಕಾರಣಿಗಳು, ಗಣ್ಯಮಾನ್ಯರು, ಜನಪ್ರತಿನಿಧಿಗಳು, ಹಿರಿಯರು, ಶಿರಹಟ್ಟಿ ಮತಕ್ಷೇತ್ರದ ಎಲ್ಲ ತಾಂಡಗಳ ಸಮಾಜ ಬಾಂಧವರು ಉಪಸ್ಥಿತರಿರುವರು ಎಂದು ಮಾಹಿತಿ ನೀಡಿದರು.

## ಎಸ್.ಎಚ್. ಕೊಡಕೇರಿ ಸೇವಾ ನಿವೃತ್ತಿ ಇಂದು

■ವಿಜಯಸಾಕ್ಷಿ ಸುದ್ದಿ, ಗದಗ



ವಾ.ಕ.ರ.ಸಾ ಸಂಸ್ಥೆಯ ಗದಗ ವಿಭಾಗೀಯ ಕಚೇರಿಯ ಗದಗ ಹೊಸ ಬಸ್‌ನಿಲ್ದಾಣದಲ್ಲಿ ಸಾರಿಗೆ ನಿಯಂತ್ರಕರಾಗಿ ಸುದೀರ್ಘ ಸೇವೆ ಸಲ್ಲಿಸಿದ ಎಸ್. ಎಚ್. ಕೊಡಕೇರಿ ಫೆ.29ರಂದು ವಯೋ ನಿವೃತ್ತಿ ಹೊಂದುವರು. ಗದಗ ಹೊಸ ಬಸ್ ನಿಲ್ದಾಣದಲ್ಲಿ ಮುಂಜಾನೆ ಹಿರಿಯ ಅಧಿಕಾರಿಗಳ ಉಪಸ್ಥಿತಿಯಲ್ಲಿ ಸೇವಾ ನಿವೃತ್ತಿಯ ಬೀಳ್ಕೊಡುಗೆ ಸಮಾರಂಭ ನಡೆಯಲಿದೆ ಎಂದು ಕಾರ್ಮಿಕರ ಮುಖಂಡ ಎಸ್.ಕೆ. ಅಯ್ಯನಗೌಡ್ರ ತಿಳಿಸಿದ್ದಾರೆ.

## ರಾಮು ವಾಲ್ಮೀಕಿ ಜಿಲ್ಲಾಧ್ಯಕ್ಷರಾಗಿ ನೇಮಕ

■ವಿಜಯಸಾಕ್ಷಿ ಸುದ್ದಿ, ಗದಗ



ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಮೇಲ್ವಿಚಾರಣೆ ಮತ್ತು ಬಲವರ್ಧನ ಸಮಿತಿಯ ಜಿಲ್ಲಾ ಅಧ್ಯಕ್ಷರನ್ನಾಗಿ ನೇಮಕ ಮಾಡಿ ಆದೇಶ ಹೊರಡಿಸಲಾಗಿದೆ.

ಸಮಿತಿಯ ರಾಜ್ಯಾಧ್ಯಕ್ಷರಾದ ಶ್ರೀಮತಿ ಯಶೋಧಾ.ಪಿ ಅವರ ಆದೇಶದ ಮೇರೆಗೆ ರಾಜ್ಯ ಸಂಘಟನಾ ಕಾರ್ಯದರ್ಶಿಗಳಾದ ಬಸವರಾಜ್ ಸಂಗಪ್ಪ ಬೇವಿನಮರದ, ಸಮಿತಿಯ ಜಿಲ್ಲಾ ಅಧ್ಯಕ್ಷರನ್ನಾಗಿ ರಾಮು ವಾಲ್ಮೀಕಿ ಅವರನ್ನು ನೇಮಕ ಮಾಡಿದ್ದಾರೆ.

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಮೇಲ್ವಿಚಾರಣೆ ಮತ್ತು ಬಲವರ್ಧನ ಸಮಿತಿಯ ಜಿಲ್ಲಾಧ್ಯಕ್ಷರಾಗಿ ನೇಮಕಗೊಂಡ ರಾಮು ವಾಲ್ಮೀಕಿ ಅವರಿಗೆ ಗೆಳೆಯರ ಬಳಗ ಅಭಿನಂದಿಸಿದೆ.

## ಅಕ್ರಮವಾಗಿ ಸಾಗಿಸುತ್ತಿದ್ದ ಜಾನುವಾರುಗಳ ರಕ್ಷಣೆ



■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ತಾಲೂಕಿನ ಗೊಜನೂರ ಗ್ರಾಮದ ಬಳಿ ಮಂಗಳವಾರ ರಾತ್ರಿ ಗೋವುಗಳ ಅಕ್ರಮ ಸಾಗಾಟದ ವಾಹನ ತಡೆದು ಅದರಲ್ಲಿದ್ದ 4 ಆಕಳು ಮತ್ತು 2 ಎತ್ತುಗಳನ್ನು ಪೊಲೀಸರ ಮೂಲಕ ಗೋಶಾಲೆಗೆ ಕಳುಹಿಸುವಲ್ಲಿ ಲಕ್ಷ್ಮೇಶ್ವರದ ಹಿಂದೂ ಸಂಘಟನೆಯ ಕಾರ್ಯಕರ್ತರು ಯಶಸ್ವಿಯಾಗಿದ್ದಾರೆ.

ರಾತ್ರಿ 1 ಗಂಟೆ ವೇಳೆಗೆ ಟಾಟಾಏಸ್ ವಾಹನದಲ್ಲಿ ಸ್ಥಳಾವಕಾಶ, ಸುರಕ್ಷಿತ ವ್ಯವಸ್ಥೆಯಿಲ್ಲದಿದ್ದರೂ ಅದರ ಚಾಲಕ-ಮಾಲಿಕ ಸೇರಿ ಜಾನುವಾರುಗಳನ್ನು ಕ್ರೌರ್ಯದಿಂದ ತುಂಬಿಕೊಂಡು ಸಾಗಿಸುತ್ತಿದ್ದಾಗ ಹಿಂದೂಪರ ಸಂಘಟನೆಯ ಕಾರ್ಯಕರ್ತರು ವಾಹನ ತಡೆದು ಗೋವು, ಎತ್ತುಗಳನ್ನು ವಾಹನ ಸಮೇತ ಪೊಲೀಸರಿಗೆ ಒಪ್ಪಿಸಿದ್ದಾರೆ.

ದೂರಿನನ್ವಯ ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು ಗೋವುಗಳನ್ನು ಸುರಕ್ಷಿತವಾಗಿ ಗದುಗಿನ ಮಹಾವೀರ ಗೋಶಾಲೆಯಲ್ಲಿ ಬಿಟ್ಟಿದ್ದಾರೆ.

ಪಟ್ಟಣದಲ್ಲಿ ಅಕ್ರಮ ಗೋಸಾಗಾಟ ಅವ್ಯಾಹತವಾಗಿದೆ. ಈ ಬಗ್ಗೆ ಪೊಲೀಸರು ಮತ್ತು ಸಂಬಂಧಪಟ್ಟ ಅಧಿಕಾರಿಗಳಿಗೆ ಮಾಹಿತಿ ಇದ್ದರೂ ಮೌನ ವಹಿಸಿದ್ದು, ಇದನ್ನು ತಡೆಯಹೊರಟ ಹಿಂದೂಪರ ಸಂಘಟನೆಯ ಕಾರ್ಯಕರ್ತರಿಗೆ ಪೊಲೀಸರು ಅಸಹಕಾರ ತೋರುತ್ತಿದ್ದಾರೆ.

ಇನ್ನಾದರೂ ಈ ರೀತಿ ಅಕ್ರಮ ಗೋಸಾಗಾಟ ದಂಧೆ ತಡೆಯುವ ನಿಟ್ಟಿನಲ್ಲಿ ನಿಗಾವಹಿಸಬೇಕು ಎಂದು ಭಜರಂಗದಳ ಸಂಘಟನೆಯ ತಾಲೂಕು ಸಂಯೋಜಕ ಮಹಾಂತೇಶ ಗೋಡಿ ಆಗ್ರಹಿಸಿದರು. ಈ ಸಂದರ್ಭದಲ್ಲಿ ಕಾರ್ಯಕರ್ತರಾದ ನವೀನ ಕುಂಬಾರ, ಈರಣ್ಣ ಚಿಲ್ಲೂರಮಠ, ಈರಣ್ಣ ಪೂಜಾರ, ಬಸವರಾಜ ಚಕ್ರಸಾಲಿ, ಮುತ್ತು ಕರ್ಜಕಣ್ಣನವರ, ಸಚಿನ ದನದಮನಿ ಇದ್ದರು.

## ವರದಿ ಬಳಿಕ ಚರ್ಚಿಸಿ 7ನೇ ವೇತನ ಆಯೋಗ ಜಾರಿಗೆ ತೀರ್ಮಾನ: ಸಿಎಂ ಸಿದ್ದರಾಮಯ್ಯ

■ವಿಜಯಸಾಕ್ಷಿ ಸುದ್ದಿ, ಬೆಂಗಳೂರು

ವರದಿ ಬಂದ ಬಳಿಕ ರಾಜ್ಯ ಸರ್ಕಾರಿ ನೌಕರರಿಗೆ 7ನೇ ವೇತನ ಆಯೋಗದ ವರದಿ ಮತ್ತು ಹಳೆ ಪಿಂಚಣಿ ಯೋಜನೆ (ಒಪಿಎಸ್) ಕುರಿತು ಚರ್ಚಿಸಿ ತೀರ್ಮಾನ ಕೈಗೊಳ್ಳಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಂಗಳವಾರ ಭರವಸೆ ನೀಡಿದರು.

ಅರಮನೆ ಮೈದಾನದಲ್ಲಿ ಮಂಗಳವಾರ ಆಯೋಜಿಸಿದ್ದ ರಾಜ್ಯ ಸರ್ಕಾರಿ ನೌಕರರ ಸಮ್ಮೇಳನ ಉದ್ಘಾಟಿಸಿ ಅವರು ಮಾತನಾಡಿದ ಅವರು, ನಾನು ಉಪ ಮುಖ್ಯಮಂತ್ರಿಯಾಗಿದ್ದ ವೇಳೆ 1996ರಲ್ಲಿ 5ನೇ ವೇತನ ಆಯೋಗ, ಮೊದಲ ಬಾರಿ ಮುಖ್ಯಮಂತ್ರಿಯಾಗಿದ್ದ ವೇಳೆ 6ನೇ ವೇತನ ಆಯೋಗ ಜಾರಿ ಮಾಡಿದ್ದೇವೆ. ಈಗ 7ನೇ ವೇತನ ಆಯೋಗ ಕೂಡ ನಾನು ಅಧಿಕಾರದಲ್ಲಿರುವಾಗಲೇ ಬಂದಿದೆ ಎಂದು ಹೇಳಿದರು.

ಮಾ.15ರೊಳಗೆ ಹಾಗೂ ಲೋಕಸಭಾ ಚುನಾವಣಾ ನೀತಿ ಸಂಹಿತೆ ಜಾರಿಯಾಗುವ ಮುನ್ನವೇ ವರದಿ ನೀಡುವಂತೆ 7ನೇ ವೇತನ ಆಯೋಗದ ಅಧ್ಯಕ್ಷ ಕೆ. ಸುಧಾಕರ್ ರಾವ್ ಅವರಿಗೆ ತಿಳಿಸಿದ್ದೇವೆ. ವರದಿ ನೀಡಿದರೆ ಚರ್ಚಿಸಿ ಅನುಷ್ಠಾನ ಮಾಡಲಾಗುತ್ತದೆ.


**Form - IV**

**(See rule 8)**

Statement Showing the Ownership of **VIJAYASAKSHI** KANNADA DAILY NEWS PAPER

1) Place of publication : GADAG
Printed at Sai Printing Press and publishers, H.No. 130/154, Balaji nagar, Gadag. Published at **Vijaya Sakshi,** Near Ring Road, Gadag-582103

2) Periodicitiy of publication: Daily (Kannada)

3) Printer's Name : **Hussainsab M. Shareefanavar**
(Whether citizen of india)
YES
Address : H.No. 130/154, Balaji nagar, Near Ring Road, Gadag. (Karnataka)

4) Publisher's Name : **Hussainsab M. Shareefanavar**
(Whether citizen of india)
YES
Address : H.No. 130/154, Balaji nagar, Near Ring Road, Gadag. (Karnataka)

5) Editor's Name : **Hussainsab M. Shareefanavar**
(Whether citizen of india)
YES
Address : H.No. 130/154, Balaji nagar, Near Ring Road, Gadag. (Karnataka)

6) Name and address of : **Hussainsab M. Shareefanavar** individual who own the newspaper or printers or in individual Capacity shareholder holding more (Sole Proprietor) than one percent of the H.No. 130/154, Balaji nagar, Near Ring Road, Gadag. total capital (Karnataka)

I **Hussainsab M. Shareefanavar** hereby declare that the particulars given above are true to the best of my knowledge and belief.

28-02-2024

**Hussainsab M. Shareefanavar**
Signature of the Publisher


VIJAYA SAKSHI KANNADA DAILY MORNING Editor, Printer, Publisher, & Owned by : Hussainsab M. Shareefanavar, H.No. 130/154, Balaji Nagar, Near Ring Road, Gadag-582103, Dist : Gadag- Karnataka Printed at : Sai Printing Press, Near Joda Maruti Temple, Gadag-582101, Dist : Gadag- Karnataka